# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ –02 ಸಂಚಿಕೆ –238 | ಆರ್‌ಎನ್‌ಐ ನಂ: ಕೆಎಆರ್‌ಕೆಎಎನ್/2023/88462 | ಕೆಎ/ಎಸ್‌ಕೆ/ಸಿಟಿಎ–874/2024–2026 | ಚಿತ್ರದುರ್ಗ | ದಿನಾಂಕ: 14–04–2025 ಸೋಮವಾರ | ಪುಟ: 4 | ಬೆಲೆ : ರೂ.2–00
Volume - 02 Issue - 238 | RNI No: KARKAN/2023/88462 | KA/SK/CTA-874/2024-2026 | Chitradurga | Date: 14-04-2025 Monday | Page: 4 | Price: Rs. 2-00



ಒಳಪುಟದ ಸುದ್ದಿಗಳು

ಕಾಂಗ್ರೆಸ್ ಅಂಬೇಡ್ಕರ್‌ಗೆ ಅನ್ಯಾಯವನ್ನೇ ಮಾಡುತ್ತಾ ಬಂದಿದೆ: ಕಾರಜೋಳ ಆರೋಪ 2

ಉತ್ತಮ ಬದುಕನ್ನು ರೂಪಿಸಿಕೊಳ್ಳಲು ದೇವರ ಕೃಪೆ ಅಗತ್ಯ: ಟಿ.ರಘುಮೂರ್ತಿ 3

ಆಧುನಿಕ ಭಾರತದ ಸಮಾನತೆಯ ಸೂರ್ಯ ಡಾ.ಬಿ.ಆರ್.ಅಂಬೇಡ್ಕರ್ 4



ಸುದ್ದಿ, ಜಾಹಿರಾತಿಗೆ
9686622252


## ಫಾಸ್ಟ್ ನ್ಯೂಸ್

### ಪಾದಚಾರಿ ಮಹಿಳೆ ಮೇಲೆ ಕಾರು ಹರಿದು ಸ್ಥಳದಲ್ಲೆ ಸಾವು

» **ಹೊಸದುರ್ಗ**

ರಸ್ತೆಯ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಮಹಿಳೆಯೋರ್ವಳ ಮೇಲೆ ಕಾರು ಹರಿದ ಪರಿಣಾಮ ಸ್ಥಳದಲ್ಲೆ ಸಾವನ್ನಪ್ಪಿರುವ ಘಟನೆ ತಾಲೂಕಿನ ಮಧುರೆ ದಿಬ್ಬದ ಸಮೀಪ ಶನಿವಾರ ಬೆಳಿಗ್ಗೆ ಸಂಭವಿಸಿದೆ. ಮೃತ ಮಹಿಳೆಯನ್ನು ತಾಲೂಕಿನ ಬಾಗೂರು ಗ್ರಾಮದ ನಾಗರಾಜಪ್ಪ ಎಂಬುವವರ ಪತ್ನಿ ಗೀತಾ (50) ಎಂದು ತಿಳಿದು ಬಂದಿದ್ದು ಗೀತಾ ಎಂಬವವರು ಸಂಕಯ್ಯನಹಟ್ಟಿ ಗ್ರಾಮದ ಅವರ ಸಂಬಂಧಿಕರ ಮನೆಯಿಂದ ಕೂಲಿ ಕೆಲಸಕ್ಕಾಗಿ ಮಧುರೆ ಸಮೀಪವಿರುವ ಜಮೀನಿಗೆ ರಸ್ತೆಯ ಬದಿಯಲ್ಲಿ ಶನಿವಾರ ಬೆಳಿಗ್ಗೆ 6.30 ರ ಸಮಯದಲ್ಲಿ ನಡೆದುಕೊಂಡು ಸಂಧರ್ಬದಲ್ಲಿ ಕಾರಿನ ಚಾಲಕ ಅತಿ ವೇಗ ಮತ್ತು ಅಜಾಗರೂಕತೆಯಿಂದ ಬಂದು ರಭಸವಾಗಿ ಡಿಕ್ಕಿ ಹೊಡೆದ ಪರಿಣಾಮ ಮಹಿಳೆ ಸ್ಥಳದಲ್ಲೆ ಸಾವನ್ನಪ್ಪಿದ್ದಾರೆ,ಕಾರು ಚಾಲಕ ತನ್ನ ಕಾರನ್ನ ನಿಲ್ಲಿಸದೆ ಕಾರು ಸಮೇತ ಪರಾರಿಯಾಗಿದ್ದು ಈ ಬಗ್ಗೆ ಹೊಸದುರ್ಗ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೋಲಿಸರು ಆರೋಪಿಯ ಪತ್ತೆಯ ಕಾರ್ಯದಲ್ಲಿ ತೊಡಗಿದ್ದಾರೆ.

### ಕಾಲಭೈರವೇಶ್ವರ ಸ್ವಾಮಿ ರಥೋತ್ಸವ



» **ಹೊಳಲ್ಕೆರೆ**

ಪಟ್ಟಣದಐತಿಹಾಸಿಕಹಿನ್ನೆಲೆಯಕಾಲಭೈರವೇಶ್ವರ ಸ್ವಾಮಿ ರಥೋತ್ಸವ ಶನಿವಾರ ಸಂಜೆ ಸಾವಿರಾರು ಭಕ್ತರ ಸಮಕ್ಷಮ ಅದ್ದೂರಿಯಾಗಿ ನಡೆಸಲಾಯಿತು. ಇದಕ್ಕೂ ಮೊದಲು ದೇವಸ್ಥಾನದ ಅರ್ಚಕರಿಂದ ವಿಶೇಷ ಪೂಜೆ ಸಲ್ಲಿಸಿ ರಥದ ಮುಂದೆ ದೊಡ್ಡಡೆ ಹಾಕಲಾಗಿತ್ತು. ಬಳಿಕ ಅಕ್ಷತಾ ಪೂಜಾ ನೆರವೇರಿಸಲಾಯಿತು. ಸಾವಿರಾರು ಭಕ್ತರು ರಥವನ್ನು ಎಳೆಯುವದರ ಮೂಲಕ ಕಾಲಭೈರವೇಶ್ವರ ಜೈ ಎಂದು ಘೋಷಣೆ ಕೂಗಿದರು. ಜಾತ್ರೆಗೆ ಆಗಮಿಸಿದ ಭಕ್ತರು ರಥದ ಗಾಲಿಗೆ ತೆಂಗಿನಕಾಯಿ ಹೊಡೆದು , ರಥದ ಕಳಸಕ್ಕೆ ಬಾಳೆಹಣ್ಣು ಎಸೆದು ಮಂಡಕ್ಕಿ ಮೆಣಸು ಸಮರ್ಪಿಸಿ ಇಷ್ಟಾರ್ಥ ಸಿದ್ಧಿ ಗಾಗಿ ಭಕ್ತಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

### ದೇವಸ್ಥಾನ ಕಳ್ಳತನಕ್ಕೆ ಬಂದ ಕಳ್ಳರನ್ನು ಹಿಡಿದ ಗೋಪನಹಳ್ಳಿ ಗ್ರಾಮಸ್ಥರು



» **ಚಳ್ಳಕೆರೆ**

ತಾಲ್ಲೂಕಿನ ಗೋಪನಹಳ್ಳಿ ಗ್ರಾಮದಲ್ಲಿ ತಡರಾತ್ರಿ ಗ್ರಾಮದ ರಂಗನಾಥಸ್ವಾಮಿ ದೇವಸ್ಥಾನಕ್ಕೆ ಕಳ್ಳತನಕ್ಕೆ ಬಂದಿದ್ದ ಕಳ್ಳರನ್ನು ಗ್ರಾಮಸ್ಥರೇ ಹಿಡಿದು ಪೊಲೀಸರಿಗೆ ಒಪ್ಪಿಸಿದ ಘಟನೆ ನಡೆದಿದೆ. ರಾಡು, ಕಟರ್ ಸಹಾಯದಿಂದ ದೇವಸ್ಥಾನ ಆಭರಣಗಳನ್ನು ಕಳ್ಳತನ ಮಾಡಲು ಮುಂದಾಗಿದ್ದ ಕಳ್ಳರನ್ನು ಗ್ರಾಮದ ಕೆಲವರು ನೋಡಿ ಪೊಲೀಸರಿಗೆ ನೀಡಿದ್ದಾರೆ. ಸ್ಥಳಕ್ಕೆ ಬಂದ ಪೊಲೀಸರು ಕಳ್ಳತನಕ್ಕೆ ಬಂದಿದ್ದ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ನೊಂದಾಣೆ ಸಂಖ್ಯೆ ಇಲ್ಲದ ಬೈಕ್‌ನಲ್ಲಿ ಆಗಮಿಸಿದ್ದು ವಿಚಾರಣೆ ಮುಂದುವರೆದಿದೆ. ಗ್ರಾಮಸ್ಥರ ಸಕಲಿನ ಕ್ರಮದಿಂದ ದೇವಸ್ಥಾನದ ಕಳ್ಳತನ ತಪ್ಪಿದ್ದು, ಗ್ರಾಮಸ್ಥರು ನಿಟ್ಟುಸಿರು ಬಿಟ್ಟಿದ್ದಾರೆ. ಪೊಲೀಸ್ ಇಲಾಖೆ ಅಧಿಕಾರಿಗಳು ಇಬ್ಬರ ಕಳ್ಳರ ವಿಚಾರಣೆ ಮುಂದುವರೆಸಿದ್ದಾರೆ.

# ಕಾಂಗ್ರೆಸ್ ಪಕ್ಷದ ಗೆಲುವಿನಲ್ಲಿ ಕಾರ್ಯಕರ್ತರ ಪಾತ್ರ ಅಪಾರ: ಸಚಿವ ಡಿ.ಸುಧಾಕರ್ ಹೇಳಿಕೆ

**ಪಕ್ಷದ ಗೆಲುವನ್ನು ತನ್ನಗೆಲುವೆಂದು ಬಾವಿಸಿ ಕಾರ್ಯಕರ್ತರು ಕಾರ್ಯನಿರ್ವಹಿಸಬೇಕು –ಐದು ಗ್ಯಾರಂಟಿಗಳ ಅನುಷ್ಠಾನದಿಂದ ಪಕ್ಷಕ್ಕೆ ಮತ್ತೊಮ್ಮೆ ಉತ್ತಮ ಭವಿಷ್ಯ**

» **ಚಳ್ಳಕೆರೆ**



ರಾಷ್ಟ್ರದಭವಿಷ್ಯವನ್ನು ಉಜ್ವಲಗೊಳಿಸಿದ ಏಕೈಕ ಪಕ್ಷವೆಂದರೆ ಅದು ಕಾಂಗ್ರೆಸ್‌ಮಾತ್ರ, ಸುಮಾರು 140 ವರ್ಷಗಳಿಂದ ದೇಶದ ಎಲ್ಲಾ ಜನಾಂಗದ ಹಿತವನ್ನು ಕಾಪಾಡುವಲ್ಲಿ ಕಾಂಗ್ರೆಸ್ ಬದ್ದವಾಗಿದೆ. ಕಾಂಗ್ರೆಸ್ ಪಕ್ಷದ ಸರ್ವತೋಮುಖ ಬೆಳವಣಿಗೆಗೆ ಪಕ್ಷದ ಕಾರ್ಯಕರ್ತರು ಶ್ರಮಿಸಿದ್ದು ಕಾರ್ಯಕರ್ತರ ಸೇವೆಯ ಬಗ್ಗೆ ಪಕ್ಷಕ್ಕೆ ಅಪಾರಗೌರವವಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತಮ ಆಡಳಿತದ ಮೂಲಕ ಜನರ ಮನಸ್ಸು ಗೆದ್ದಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಾಜ್ಯಾಧ್ಯಕ್ಷರಾಗಿ ಪಕ್ಷದ ಬೆಳವಣಿಗೆಗೆ ಶ್ರಮಿಸಿದ್ಧಾರೆ. ವಿಶೇಷವಾಗಿ ರಾಜ್ಯದಲ್ಲಿ ನಡೆದ ರಾಹುಲ್‌ಗಾಂಧಿಯವರ ಭಾರತ್ ಜೋಡೋಯಾತ್ರೆ ಪಕ್ಷಕ್ಕೆ ಹೊಸ ಶಕ್ತಿ ತಂದುಕೊಟ್ಟಿತ್ತು ಎಂದು ರಾಜ್ಯ ಯೋಜನೆ ಮತ್ತು ಸಾಂಖ್ಯಿಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ ತಿಳಿಸಿದರು.

ಅವರು, ನಗರದ ಶಾಸಕರ ಭವನದ ಆವರಣದಲ್ಲಿ ಶನಿವಾರ ಪಕ್ಷ ಹಮ್ಮಿಕೊಂಡಿದ್ದ ಸರ್ಕಾರದ ನಡೆ, ಕಾರ್ಯಕರ್ತರ ಕಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ರಾಜ್ಯದಲ್ಲಿ ಎರಡನೇ ಬಾರಿಗೆ ಅಧಿಕಾರಕ್ಕೆ ಬಂದ ನಂತರ ಚುನಾವಣೆಯಲ್ಲಿ ನೀಡಿದ ಐದು ಗ್ಯಾರಂಟಿಗಳನ್ನು ಜನರಿಗೆ ತಲುಪಿಸುವ ಮೂಲಕ ಸರ್ಕಾರ ಹಾಗೂ ಪಕ್ಷ ಜನರ ವಿಶ್ವಾಸಗಳಿಸಿದೆ. ಮುಂಬರುವ ಜಿಲ್ಲಾ, ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಪಕ್ಷವನ್ನು ಗೆಲ್ಲಿಸುವ ಸಂಕಲ್ಪವನ್ನು ಕಾರ್ಯಕರ್ತರು ಮಾಡಬೇಕೆಂದರು.

ದಿಕ್ಸೂಚಿ ಭಾಷಣ ಮಾಡಿದ ಮಾಜಿ ಸಂದಸ ಬಿ.ಎನ್.ಚಂದ್ರಪ್ಪ, ಕಾಂಗ್ರೆಸ್ ಪಕ್ಷ ಕಾರ್ಯಕರ್ತರ ಶ್ರಮದಿಂದಲೇ ಅಧಿಕಾರಕ್ಕೆ ಬಂದಪಕ್ಷವಾಗಿದೆ. ಕಾಂಗ್ರೆಸ್‌ಪಕ್ಷದ ಜನಪ್ರಿಯತೆಯಿಂದ ಬಿಜೆಪಿ ನಾಯಕರಲ್ಲಿ ಅಸಮದಾನ ಮೂಡಿದೆ. ಅನಗ್ಯವಾಗಿ ಸುಳ್ಳುಪ್ರಚಾರ ಮಾಡುವ ಮೂಲಕ ಕಾಂಗ್ರೆಸ್ ಪಕ್ಷದ ವರ್ಚಸಿಗೆ ದಕ್ಕೆ ತರಲು ವಿರೋಧಪಕ್ಷಗಳು ನಿರಂತರ ಶ್ರಮಿಸುತ್ತಿದ್ದರೂ ನಾಡಿನ ಮತದಾರರ ಒಲವು ನಮ್ಮ ಪಕ್ಷದ ಮೇಲಿದೆ. ಪಕ್ಷದ ಕಾರ್ಯಕರ್ತರು ಸ್ಥಳೀಯ ಚುನಾವಣೆಗಳಲ್ಲಿ ಪಕ್ಷವನ್ನು ಬಲಪಡಿಸುವಕಾರ್ಯವನ್ನು ಮಾಡಬೇಕು. ಚುನಾವಣೆಯಲ್ಲಿ ಗೆಲುವು ಸಾಧಿಸಿ ಮತ್ತೊಮ್ಮೆಕಾಂಗ್ರೆಸ್ ಪಕ್ಷದಗತವೈಭವವನ್ನು ಎಲ್ಲರೂ ಕಾಣುವಂತಾಗಬೇಕೆಂದರು. ಮಾಜಿ ಸಚಿವ ಎಚ್.ಆಂಜನೇಯ ಮಾತನಾಡಿ, ಪ್ರತಿನಿತ್ಯವೂ ಬಿಜೆಪಿ ನಾಯಕರು ಪಕ್ಷದ ವಿರುದ್ದ ವಿನಾಕಾರಣ ಸುಳ್ಳು ಆರೋಪಗಳನ್ನು ಹೋರಿಸುತ್ತಾ ಬಂದಿದ್ದಾರೆ. ಪಕ್ಷದ ಕಾರ್ಯಕರ್ತರು ದಕ್ಷತೆ, ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಿದರೆ ಮಾತ್ರ ಪಕ್ಷದ ಬೆಳವಣಿಗೆ ಸಾಧ್ಯ. ಪಕ್ಷಬೆಳೆದರೆ ಕಾರ್ಯಕರ್ತರೂ ಸಹ ಬೆಳೆದಂತೆ. ಮುಂಬರುವ ದಿನಗಳಲ್ಲಿ ಪಕ್ಷದ ಕಾರ್ಯಕರ್ತರಿಗೆಸೂಕ್ತಸ್ಥಾನಮಾನಗಳನ್ನು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ನೀಡುವಂತೆ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಶಾಸಕರನ್ನು ಮನವಿ ಮಾಡುವುದಾಗಿ ತಿಳಿಸಿದರು. ಜಿಲ್ಲಾ ಕೆಪಿಸಿಸಿ ಅಧ್ಯಕ್ಷ, ನಗರಾಭಿವೃದ್ದಿ ಪ್ರಾಧಿಕಾರದ ಅಧ್ಯಕ್ಷ ತಾಜ್‌ಪೀರ್ ಮಾತನಾಡಿ, ಜನರಿಗೆ ಸೂಕ್ತ ರೀತಿಯಲ್ಲಿ ನ್ಯಾಯ ಒದಗಿಸುವ ಕಾರ್ಯ ಪಕ್ಷ ಮಾಡುತ್ತಾ ಬಂದಿದೆ. ಐದು ಗ್ಯಾರಂಟಿಗಳಿಂದ ನಾಡಿನ ಜನತೆ ಸಂತೃಪ್ತರಾಗಿದ್ದಾರೆ. ಕಾಂಗ್ರೆಸ್ ಪಕ್ಷದ ಬದ್ದತೆಯ ಬಗ್ಗೆ ಜನರಿಗೆ ಹೆಚ್ಚು ತಿಳಿದಿದೆ. ಕಾರ್ಯಕರ್ತರು ಮುಂಬರುವ ಚುನಾವಣೆಯಲ್ಲಿ ಪಕ್ಷದ ಗೆಲುವಿಗೆ ಶ್ರಮಿಸಬೇಕೆಂದರು.

ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ಟಿ.ಪ್ರಭುದೇವ್, ಜಿಲ್ಲಾ ಗ್ಯಾರಂಟಿ ಸಮಿತಿ ಅದ್ಯಕ್ಷ ಶಿವಣ್ಣ, ನಗರಸಭೆ ಅಧ್ಯಕ್ಷೆ ಆರ್. ಮಂಜುಳಾ, ಸದಸ್ಯೆ ಕವಿತಾಬೋರಯ್ಯ, ಎಸ್.ಎಚ್.ಸೈಯದ್ ಮುಂತಾದವರು ಮಾತನಾಡಿದರು.ಸಭೆಯಅಧ್ಯಕ್ಷತೆವಹಿಸಿದ್ದ ಶಾಸಕ, ಸಣ್ಣಕೈಗಾರಿಕೆ ಅಭಿವೃದ್ದಿಮಂಡಳಿ ಅಧ್ಯಕ್ಷ ಟಿ.ರಘುಮೂರ್ತಿ ಮಾತನಾಡಿ, ಮೂರುಬಾರಿ ಈ ಕ್ಷೇತ್ರದ ಶಾಸಕನಾಗಿ ಆಯ್ಕೆಯಾಗಲು ಪಕ್ಷದ ಕಾರ್ಯಕರ್ತರ ಪರಿಶ್ರಮವೇ ಕಾರಣ. ಮೂರು ಚುನಾವಣೆಯಲ್ಲೂ ನನ್ನ ಗೆಲುವಿಗೆ ಕಾರ್ಯಕರ್ತರು ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಿದ್ಧಾರೆ. ಪಕ್ಷದ ಇತಿಮಿತಿಯೊಳಗೆ ಕಾರ್ಯಕರ್ತರಿಗೆ ಸರ್ಕಾರದ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತೇನೆ. ಈಗಾಗಲೇ ಕೆಲವೊಂದು ಸಮಿತಿಗೆ ಕಾರ್ಯಕರ್ತರನ್ನು ನೇಮಿಸಲಾಗಿದೆ. ಕಾರ್ಯಕರ್ತರ ಗೆಲುವು ಪಕ್ಷದ ಗೆಲುವಾಗಬೇಕು. ಕಾರ್ಯಕರ್ತರಿಂದಲೇ ಪಕ್ಷದ ಬೆಳವಣಿಗೆ ಸಾಧ್ಯ. ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷವನ್ನು ಕಟ್ಟಿಬೆಳೆಸುವಲ್ಲಿ ಕಾರ್ಯಕರ್ತರ ಶ್ರಮಕ್ಕೆ ಬೆಲೆಕಟ್ಟಲು ಸಾಧ್ಯವಿಲ್ಲ. ನಿಮ್ಮೆಲ್ಲರ ಸಂಕಲ್ಪ ಮುಂಬರುವ ಚುನಾವಣೆಯಲ್ಲಿ ಪಕ್ಷವನ್ನು ಹೆಚ್ಚಿನ ಮತಗಳಿಂದ ಗೆಲುವುಕಾಣುವಂತಾಗಬೇಕೆಂದರು.

ಕಾಂಗ್ರೆಸ್ ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂಪತ್‌ಕುಮಾರ್, ಕಾರ್ಯದರ್ಶಿ ಮೈಲಾರಪ್ಪ, ಮಹಿಳಾ ಘಟಕದ ಜಿಲ್ಲಾಧ್ಯಕ್ಷ ಗೀತಾನಂದಿನಿಗೌಡ, ಜಿಲ್ಲಾಪಂಚಾಯಿತಿ ಮಾಜಿ ಸದಸ್ಯರಾದ ಬಾಬುರೆಡ್ಡಿ, ಪ್ರಕಾಶ್‌ಮೂರ್ತಿ, ರವಿಕುಮಾರ್, ಶಶಿಕಲಾಸುರೇಶ್‌ಬಾಬು, ಸಿ.ವೀರಭದ್ರಬಾಬು, ತಾಲ್ಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಗದ್ದಿಗೆತಿಪ್ಪೇಸ್ವಾಮಿ, ನಗರಸಭಾ ಉಪಾಧ್ಯಕ್ಷೆ ಸುಮಭರಮಣ್ಣ, ಸದಸ್ಯರಾದ ಕೆ.ವೀರಭದ್ರಪ್ಪ, ಜೈತುಂಬಿ, ವಿರೂಪಕ್ಷ, ಎಂ.ಜೆ.ರಾಘವೇಂದ್ರ, ಸುಜಾತ, ನಾಮಿನಿ ಸದಸ್ಯರಾದ ಅನ್ವರ್‌ಮಾಸ್ಟರ್, ವೀರಭದ್ರಪ್ಪ, ಬಡಗಿಪಾಪಣ್ಣ, ನಟರಾಜ ಮುಂತಾದವರು ಉಪಸ್ಥಿತರಿದ್ದರು.

## ರಸ್ತೆಯಲ್ಲೇ ಮಳೆ ನೀರು, ಸ್ಪಂದಿಸಿದ ಅಧಿಕಾರಿಗಳು

» **ಪರಶುರಾಂಪುರ**

ಹೋಬಳಿಯ ಸಿದ್ದೇಶ್ವರನದುರ್ಗಾ ಗ್ರಾಮದ ಪ್ರಮುಖ ರಸ್ತೆಯಲ್ಲಿ ಶುಕ್ರವಾರ ಸುರಿದು ಮಳೆಗೆ ರಸ್ತೆ ಮೇಲೆ ನೀರು ನಿಂತು ರಸ್ತೆ ದಾಟಲು ಗ್ರಾಮಸ್ಥರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.ಇದು ಪ್ರತಿವರ್ಷವೂ ಈ ಪರಿಸ್ಥಿತಿ ಎದುರಿಸುತ್ತಿದ್ದೇವೆ. ಕೂಗಳತೆಯ ಸಮೀಪ ಗ್ರಾಪಂ ಇದ್ದರೂ, ಅಧಿಕಾರಿಗಳಿಗೆ ಸಮಸ್ಯೆ ನಿವಾರಣೆಗೆ ಸಾಕಷ್ಟು ಬಾರಿ ಮನವಿ ಸಲ್ಲಿಸಿದರೂ ಇಲ್ಲಿಯವರೆಗೂ ಯಾವುದೆ ಪ್ರಯೋಜನವಾಗಿಲ್ಲ ಎಂದು ನಿವಾಸಿಗಳು ದೂರಿದ್ದಾರೆ.ಈ ಗ್ರಾಮಕ್ಕೆ ಮುಖ್ಯ ರಸ್ತೆಯಾಗಿದ್ದು,ಮುಜರೆ ಗ್ರಾಮವಾದ ಮರಡಿಹಟ್ಟಿ ಸೇರಿದಂತೆ ಹೊಲ ಮನೆ ಸೇರಿದಂತೆ ಜಿಲ್ಲಾ ರಸ್ತೆಗೆ ಸಂಪರ್ಕ ಕಲ್ಪಿಸುವದಾಗಿದೆ.

ಸಣ್ಣ ಮಳೆಯಾದರೂ ನೀರು ಎಲ್ಲೂ ಹೋಗದೆ ರಸ್ತೆಯನ್ನೇ ಆಶ್ರಯಿಸಿದೆ. ಇಲ್ಲಿ ಚರಂಡಿ ವ್ಯವಸ್ಥೆ ಇಲ್ಲದೆ, ಕೆಸರು ಮಯವಾಗಿ ಆರೋಗ್ಯ ಕೆಡುವ ಭೀತಿಯಲ್ಲಿ ಜನರು ದಿನದೂಡುತ್ತಿದ್ದಾರೆ.

ವಯೋವೃದ್ದರು, ಮಕ್ಕಳು ರಸ್ತೆ ದಾಟಲು ನೀರಲ್ಲಿ ಹೋಗುವಾಗ ಬಿದ್ದು ಆಸ್ಪತ್ರೆ ಸೇರಿರುವ ಸಾಕಷ್ಟು ಉದಾಹರಣೆಗಳಿವೆ.

ಸೊಳ್ಳೆಗಳು ತಾಣವಾಗುವುದು ಪ್ರತಿ ವರ್ಷವೂ ಇದೇ ಗೋಳು. ಆದರೂ ಸಂಬಂಧ ಪಟ್ಟ ಪಿಡಿಒ, ಇಒ, ಸಿಇಒ ಮಾತ್ರ ಸಮಸ್ಯೆ ನಿವಾರಿಸಲು ಇತ್ತ ಗಮನಹರಿಸದಿರುವುದು ಗ್ರಾಮಸ್ಥರ ಆಕ್ರೋಶಕ್ಕೆ ಕಾರಣವಾಗಿದೆ ಎಂದು ನಿವಾಸಿಗಳು ತಿಳಿಸಿದರು.

ಪುಟ ↘ 2



## ಪ್ರಮುಖ ಸುದ್ದಿ

# ಹಿರಿಯರ ಆಸ್ತಿ ಹಂಚಿಕೊಳ್ಳುವ ಮಕ್ಕಳು ಮೊಮ್ಮಕ್ಕಳು ಆಸ್ತಿಯ ಜೊತೆಗೆ ಅವರ ಆದರ್ಶಗಳನ್ನು ಅಳವಡಿಸಿಕೊಳ್ಳಬೇಕು

» **ಹೊಸದುರ್ಗ**



ಹಿರಿಯರ ಆಸ್ತಿ ಹಂಚಿಕೊಳ್ಳುವ ಮಕ್ಕಳು ಮೊಮ್ಮಕ್ಕಳು ಆಸ್ತಿಯ ಜೊತೆಗೆ ಅವರ ಆದರ್ಶಗಳನ್ನು ಅಳವಡಿಸಿಕೊಂಡಾಗ ನಮ್ಮ ಹಿರಿಯರ ಆತ್ಮಕ್ಕೆ ನಿಜವಾದ ಗೌರವ ಆತ್ಮ ಶಾಂತಿ ಸಿಗಲು ಸಾಧ್ಯ ಎಂದು ವಿಧಾನ ಪರಿಷತ್ ಸದಸ್ಯ ಕೆ ಎಸ್ ನವೀನ್ ಹೇಳಿದರು.ತಾಲೂಕಿನ ಲಿಂಗದಹಳ್ಳಿ ಗ್ರಾಮದಲ್ಲಿ ನಡೆದ ಗುರುವಿನ ಸಾನಿಧ್ಯ ದಲ್ಲಿ ಸುಜ್ಞಾನ ಸಂಗಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.ಹಿಂದೆ ನಮ್ಮ ಪೂರ್ವಜರು ಮನೆಯಿಂದ ಹೊರ ಹೋಗುವಾಗ ಹಣೆಗೆ ಕುಂಕುಮ ವಿಭೂತಿ ಬಂಡಾರಗಳನ್ನು ಧರಿಸಿ ಹೋಗುತ್ತಿದ್ದರು ಆದರೆ ಇಂದಿನ ಯುವಕರು ಈ ಆದರ್ಶಗಳನ್ನು ಬದುಕುತ್ತಿ ಕೇವಲ ಯಾಂತ್ರಿಕ ಜೀವನವನ್ನು ನಡೆಸುತ್ತಿದ್ದಾರೆ. ಗುರುಗಳು ತೋರಿದ ದಾರಿಯಲ್ಲಿ ನೆಡೆದಲ್ಲಿ ಯಶಸ್ಸು ಕಳಿಸಲು ಸಾಧ್ಯ ಎಂದರು.

ಕನಕ ಗುರುಪೀಠದ ಪೂಜ್ಯಶ್ರೀ ಈಶ್ವರಾನಂದಪುರಿ ಸ್ವಾಮೀಜಿ ಮಾತನಾಡಿ ಹಿರಿಯರ ಲಾಲನೆ ಪೋಷಣೆ ಮಾಡುವ ಮೂಲಕ ನಮ್ಮ ಕೌಟುಂಬಿಕ ವ್ಯವಸ್ಥೆಯನ್ನು ಪ್ರಧಾನವಾಗಿಟ್ಟುಕೊಂಡು ಬದುಕು ನಡೆಸುವುದು ಅನಿವಾರ್ಯವಾಗಿದೆ ಇವತ್ತಿನ 16 ರಿಂದ 18 ವರ್ಷದ ಯುವಕರು ದುಶ್ಚಟಗಳಿಗೆ ಡಾಬ ಸಂಸ್ಕೃತಿಗೆ. ಒಳಗಾಗುತ್ತಿರುವುದು ಅತ್ಯಂತ ಆತಂಕಕಾರಿ ಬೆಳವಣಿಗೆ ಎಂಬ ವಿಷಾದ ವ್ಯಕ್ತಪಡಿಸಿದರು.

ಸಾನಿಧ್ಯ ವಹಿಸಿದ್ದ ಕುಂಚಿಟಿಗ ಮಠದ ಶ್ರೀ ಶಾಂತವೀರ ಸ್ವಾಮೀಜಿ ಆಶೀರ್ವಚನ ನೀಡಿ ತಂದೆ ತಾಯಿಗಳ ಆಸ್ತಿ ಗಾಗಿ ಬಡೆದಾಡುವ ಮಕ್ಕಳು ಅವರ ಆದರ್ಶಗಳಿಗಾಗಿ ಪೈಪೋಟಿ ನಡೆಸಿ ಆಗ ಸಮಾಜ, ದೇಶ ಸತ್ಯದ ಸಮೃದ್ಧಿಯ ಪಥದಲ್ಲಿ ನಡೆಯಲು ಸಾಧ್ಯ. ನಿಮ್ಮ ಭವಿಷ್ಯದ ಬದುಕಿಗಾಗಿ ಗ್ರಾಮೀಣ ಜನತೆಯಲ್ಲಿ ಜಾಗೃತಿ ಮೂಡಿಸುವ ದುಷ್ಟ ಮುಕ್ತ ಹಾಗೂ ಆರ್ಥಿಕ ಸಬಲೀಕರಣ ಮಾಡಲು ನಿಮ್ಮಲ್ಲಿ ಸಾಂಸ್ಕೃತಿಕ ವಾತಾವರಣ ನಿರ್ಮಿಸಿ ನಿಮ್ಮೊಂದಿಗೆ ನಾವಿದ್ದೇವೆ ಎಂಬ ಆತ್ಮ ಬಲ ತುಂಬಲು ಹಳ್ಳಿಗಳಲ್ಲಿ ಸುಜ್ಞಾನ ಸಂಗಮ ಆಯೋಜಿಸುತ್ತಿದ್ದೇವೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಸಮಾಜದ ಅಧ್ಯಕ್ಷ ಕಲ್ಕೆರೆ ಶೇಖರಪ್ಪ ವಹಿಸಿದ್ದರು.ಸಮಾರಂಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಜಯಪ್ಪ,ಉಪನ್ಯಾಸಕ ಶಿವಕುಮಾರ್ ಸಮಾಜದ ಮುಖಂಡರಾದ ಕೋಡಿಹಳ್ಳಿ ತಮ್ಮಣ್ಣ. ಕೋಡಿಹಳ್ಳಿ ಧರಣಪ್ಪ. ತಣಿಗೇಕಲ್ಲು ಲೋಕಣ್ಣ. ಮಣಿಕಂಠ ಮಂಜು. ಮತ್ತಿತರರು ಉಪಸ್ಥಿತರಿದ್ದರು.

## ಫಾಸ್ಟ್ ನ್ಯೂಸ್

### ರಸ್ತೆಯಲ್ಲೇ ಮಳೆ ನೀರು, ಸ್ಪಂದಿಸಿದ ಅಧಿಕಾರಿಗಳು

» ಮೊದಲ ಪುಟದಿಂದ

ಸಮಸ್ಯೆ ನಿವಾರಣೆಗೆ ಸಾಕಷ್ಟು ಬಾರಿ ಗ್ರಾಮಸ್ಥರು ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಆದರೆ ಇಲ್ಲಿಯವರೆಗೂ ಯಾವುದೆ ಪ್ರಯೋಜನವಾಗಿಲ್ಲ. ಹೀಗಾಗಿ ಅಧಿಕಾರಿಗಳ ಇಚ್ಛಾಶಕ್ತಿ ಇಲ್ಲದಿರುವುದೇ ಕಾರಣ ಎಂದು ಗ್ರಾಮಸ್ಥರಾದ ನಾಗಣ್ಣ, ಹನುಮಂತರಾಯ,ನಾಗ 'ರಾಜ,ಜಂಪ್ಪಯ್ಯ, ವಿಜಯಕುಮಾರ್,ಕಲಾಂಸಾಬ್ ಸೇರಿದಂತೆ ಇನ್ನಿತರರು ಆರೋಪಿಸಿದ್ದಾರೆ. ನಮ್ಮ ಬೇಡಿಕೆಯನ್ನು ಈಡೇರಿಸದಿದ್ದರೆ ನಿಷ್ಕಾಳಜಿ ವಹಿಸಿದರೆ ಮುಂದಿನ ದಿನಗಳಲ್ಲಿ ಹೋರಾಟ ನಡೆಸುವುದಾಗಿ ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

### ಜಾತಿ ವರದಿ ಅವೈಜ್ಞಾನಿಕ: ಶರತ್ ಕುಮಾರ್

» ಹೊಳಲ್ಕೆರೆ

ರಾಜ್ಯ ಸರ್ಕಾರ ಬಿಡುಗಡೆ ಮಾಡಲು ಹೊರಟಿರುವ ಜಾತಿ ಗಣತಿ ವರದಿಯನ್ನು ತಕ್ಷಣವೇ ನಿಲ್ಲಿಸಬೇಕು. ಅದೊಂದು ಅವೈಜ್ಞಾನಿಕ ವರದಿ ಎಂದು ಹೊಳಲ್ಕೆರೆ ತಾಲೂಕು ಪಂಚಾಯಿ ಅಧ್ಯಕ್ಷ ಶರತ್ ಕುಮಾರ್ ಪಾಟೀಲ್ ಸರ್ಕಾರಕ್ಕೆ ಆಗ್ರಹಿಸಿದ್ದಾರೆ. ಜಾತಿ ವರದಿ ಅವೈಜ್ಞಾನಿಕವಾಗಿದೆ. ಕಾಂಗ್ರೆಸ್ ಪಕ್ಷದ ಸರ್ಕಾರ ತನಗೆ ಬೇಕಾದ ರೀತಿಯಲ್ಲಿ ಜಾತಿಯನ್ನು ಗಣತಿ ಮಾಡಿಸಿದೆ. ಮುಖ್ಯವಾಗಿ ಲಿಂಗಾಯತ ಸಮುದಾಯವನ್ನು ರಾಜ್ಯದಲ್ಲಿ ಮಟ್ಟ ಹಾಕುವ ಉದ್ದೇಶದಿಂದ ಅವೈಜ್ಞಾನಿಕ ವರದಿಯನ್ನು ಸೃಷ್ಟಿಸಿದೆ. ರಾಜ್ಯದಲ್ಲಿರುವ ಬಹುದೊಡ್ಡ ಜಾತಿ ಸಮುದಾಯಗಳಾದ ಲಿಂಗಾಯತರು, ಒಕ್ಕಲಿಗರು, ಎಸ್ಸಿ ಎಸ್ಟಿಗಳನ್ನ ಮತ್ತು ಹಿಂದುಳಿದ ಸಮುದಾಯವನ್ನು ಸರಿಯಾಗಿ ಲೆಕ್ಕ ಮಾಡದೆ ವರದಿಯನ್ನು ಆಯೋಗ ನೀಡಿದೆ.

ವರದಿ ತಯಾರು ಮಾಡಲು ಜನರ ಮನೆ ಬಾಗಿಲಿಗೆ ಆಗಮಿಸಿ ಮನೆಯಲ್ಲಿರುವ ಆರ್ಥಿಕ ಸಾಮಾಜಿಕ ಸಮೀಕ್ಷೆಯನ್ನು ಕೈಗೊಳ್ಳದೆ ಜಾತಿ ವರದಿಯನ್ನು ಸಿದ್ಧಪಡಿಸಲಾಗಿದೆ.

ಆದ್ದರಿಂದ ಇಂತಹ ಅವೈಜ್ಞಾನಿಕ ಜಾತಿ ವರದಿಯನ್ನು ಸರ್ಕಾರ ಬಿಡುಗಡೆ ಮಾಡುವುದರ ಹಿಂದೆ ದೊಡ್ಡ ಉನ್ನಾರ್ ಅಡಗಿದೆ. ಹಾಗಾಗಿ ಇಂತ ಅವೈಜ್ಞಾನಿಕ ವರದಿಯನ್ನು ತಕ್ಷಣವೇ ರದ್ದುಗೊಳಿಸಬೇಕು ಎಂದು ತಿಳಿಸಿದ್ದಾರೆ.

### ಕೊಲ್ಲಾಪುರದಮ್ಮ ಮತ್ತು ಆಂಜನೇಯಸ್ವಾಮಿ ಜಾತ್ರೆ

» ಚಿತ್ರದುರ್ಗ

ತಾಲ್ಲೂಕಿನ ಹಿರೇಗುಂಟನೂರು ಹೋಬಳಿ ವಿ.ಪಾಳ್ಯದಲ್ಲಿ ನಿಡುಮಾಮಿಡೇಶ್ವರಿ, ಕೊಲ್ಲಾಪುರದಮ್ಮ ಮತ್ತು ಆಂಜನೇಯಸ್ವಾಮಿ ಜಾತ್ರಾ ಮಹೋತ್ಸವ ಹಾಗೂ ನಾಲ್ಕನೆ ವರ್ಷದ ರಥೋತ್ಸವ ಏ.15 ರಿಂದ 20 ರವರೆಗೆ ಆರು ದಿನಗಳ ಕಾಲ ನಡೆಯಲಿದೆ. 15 ರಂದು ಬೆಳಿಗ್ಗೆ 9 ಕ್ಕೆ ಧ್ವಜಾರೋಹಣ, ಮಧ್ಯಾಹ್ನ 2-30 ಕ್ಕೆ ಅಮ್ಮನಿಗೆ ಅಲಂಕಾರ, ಗಂಗಾ ಪೂಜೆ ಹಾಗೂ ಗೌಡ್ರ ಮನೆಯಲ್ಲಿ ಮದುವಣಗಿತ್ತಿ ಶಾಸ್ತ್ರ. 16 ರಂದು ಬೆಳಗಿನ ಜಾವ ನಾಲ್ಕು ಗಂಟೆಗೆ ಹೊಳೆ ಪೂಜೆ ಹಾಗೂ ಹೊಳೆಮರಿ, ಒತ್ತುಮರಿ, ಬಾನುಕುರಿ, ಬಲಿಪೂಜೆ ನಂತರ ಏಳು ಗಂಟೆಗೆ ಘಟಪೂಜೆ, ರಾತ್ರಿ 9 ಕ್ಕೆ ಪಾಂಡುರಂಗಸ್ವಾಮಿ ಭಕ್ತರಿಂದ ಭಜನೆ. 17 ರಂದು ಬೆಳಿಗ್ಗೆ 9 ಕ್ಕೆ ಬೇವು ಬೇಟೆ, ಸಂಜೆ ಐದು ಗಂಟೆಯಿಂದ ಊರ ಬಾಗಿಲ ಮರಿಬಲಿ, ಅಮ್ಮನವರ ಗ್ರಾಮ ಪ್ರವೇಶ ಹಾಗೂ ಸಿಡಿ ಭಂಡಾರ ಕೊಡುವ ಶಾಸ್ತ್ರ. 18 ರಂದು ಬೆಳಿಗ್ಗೆ ಎಂಟು ಗಂಟೆಗೆ ಉಚ್ಛಾಯ ಕಾರ್ಯಕ್ರಮ, ಮಧ್ಯಾಹ್ನ ಎರಡು ಗಂಟೆಗೆ ಅನ್ನಸಂತರ್ಪಣೆ, ಮೂರು ಗಂಟೆಗೆ ರಥೋತ್ಸವ, ಸಂಜೆ ಏಳು ಗಂಟೆಯಿಂದ ರಸಮಂಜರಿ. 19 ರಂದು ಬೆಳಿಗ್ಗೆ 8 ಗಂಟೆಗೆ ಹೂವಿನ ಪಲ್ಲಕ್ಕಿ ಉತ್ಸವ, ಸಂಜೆ ನಾಲ್ಕು ಗಂಟೆಗೆ ಸಿಡಿ. 20 ರಂದು ಬೆಳಿಗ್ಗೆ 9 ಕ್ಕೆ ಗಾವು, ಮಧ್ಯಾಹ್ನ 12 ಗಂಟೆಗೆ ಓಕುಳಿಯೊಂದಿಗೆ ಅಮ್ಮನವರನ್ನು ಗುಡಿ ತುಂಬಿಸಲಾಗುವುದು. ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ತನು, ಮನ, ಧನ ಅರ್ಪಿಸಿ ಅಮ್ಮನ ಕೃಪೆಗೆ ಪಾತ್ರರಾಗುವಂತೆ ನಿಡುಮಾಮಿಡೇಶ್ವರಿ ದೇವಸ್ಥಾನ ಜೀರ್ಣೋದ್ದಾರ ಸಮಿತಿಯವರು ವಿನಂತಿಸಿದ್ದಾರೆ.

### ಚೌಡೇಶ್ವರಿ ಜಾತ್ರೆ

» ಚಿತ್ರದುರ್ಗ

ಶ್ರೀ ಹರಿಮತಿ ಚೌಡೇಶ್ವರಿ ಅಮ್ಮನವರ ಜೀರ್ಣೋದ್ದಾರ ಟ್ರಸ್ಟ್‌ವತಿಯಿಂದ ಹೊಳಲ್ಕೆರೆ ಟೌನ್ ಮಂಜುನಾಥ ಸ್ಕೂಲ್ ರೋಡ್‌ನಲ್ಲಿನ ಶ್ರೀ ಹರಿಮತಿ ಚೌಡೇಶ್ವರಿ ಅಮ್ಮನವರ ಜಾತ್ರೋತ್ಸವವೂ ಏ. 14 ಮತ್ತು 15 ರಂದು ನಡೆಯಲಿದೆ ಎಂದು ಶ್ರೀ ಹರಿಮತಿ ಚೌಡೇಶ್ವರಿ ಅಮ್ಮನವರ ಜೀರ್ಣೋದ್ದಾರ ಟ್ರಸ್ಟ್ ಅಧ್ಯಕ್ಷರು ಎಮ್ ಸತೀಶ್ ಕುಮಾರ್ ತಿಳಿಸಿದ್ದಾರೆ. ಜಾತ್ರೋತ್ಸವದ ಅಂಗವಾಗಿ ಏ. 14 ರಂದು ಅಮ್ಮನವರು ಮಧು ಒಣಗಿತ್ತಿ ಕಾರ್ಯಕ್ರಮ, ಏ. 15 ರಂದು ಬೆಳಿಗ್ಗೆ 6:30 ರಿಂದ ಗಂಗಾ ಪೂಜೆ ಪೂಜೆಯ ನಂತರ 7:30ಕ್ಕೆ ಕೆಂಡಾರ್ಚನೆ ಇರುತ್ತದೆ ನಂತರ ಭಕ್ತಾದಿಗಳಿಗೆಲ್ಲ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಲಿದೆ. ಈ ಕಾರ್ಯಕ್ರಮಕ್ಕೆ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಸದಸ್ಯರಾದ ಗೋವಿಂದ ಕಾರಜೋಳ ರವರು ಆಗಮಿಸಲಿದ್ದಾರೆ. ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ಕೋರಿದೆ ಹೆಚ್ಚಿನ ಮಾಹಿತಿಗಾಗಿ 98444 66691, 8147298002, 8861931601 ಮೊಬೈಲ್ ಸಂಖ್ಯೆಯನ್ನು ಸಂಪರ್ಕ ಮಾಡಬಹುದಾಗಿದೆ ಎಂದು ಶ್ರೀ ಹರಿಮತಿ ಚೌಡೇಶ್ವರಿ ಅಮ್ಮನವರ ಜೀರ್ಣೋದ್ದಾರ ಟ್ರಸ್ಟ್ ಅಧ್ಯಕ್ಷರು ಎಮ್ ಸತೀಶ್ ಕುಮಾರ್ ತಿಳಿಸಿದ್ದಾರೆ.

#### ಚಿತ್ರದುರ್ಗಕ್ಕೆ ಆಗಮಿಸಿದ ಬಿಜೆಪಿಯ ಭೀಮನ ಹೆಜ್ಜೆ ನೂರರ ಸಂಭ್ರಮ ರಥಯಾತ್ರೆ

# ಕಾಂಗ್ರೆಸ್ ಅಂಬೇಡ್ಕರ್‌ಗೆ ಅನ್ಯಾಯವನ್ನೇ ಮಾಡುತ್ತಾ ಬಂದಿದೆ: ಸಂಸದ ಗೋವಿಂದ ಕಾರಜೋಳ ಆರೋಪ

» ಚಿತ್ರದುರ್ಗ

ಕಾಂಗ್ರೆಸ್ ಪಕ್ಷ ಡಾ.ಬಿ.ಆರ್. ಅಂಬೇಡ್ಕರ್ ರವರಿಗೆ ಅವರ ಜೀವಿತಾವಧಿ ಹಾಗೂ ಅಂತಿಮ ಸಮಯದಲ್ಲೂ ಸಹಾ ಅವರಿಗೆ ಅನ್ಯಾಯವನ್ನು ಮಾಡುತ್ತಲೇ ಬಂದಿದೆ. ಇದು ನಮ್ಮ ಸಮುದಾಯವರಿಗೆ ತಿಳಿಯಬೇಕಿದೆ ಎಂದು ಮಾಜಿ ಉಪ ಮುಖ್ಯಮಂತ್ರಿಗಳು ಸಂಸದರಾಧ ಗೋವಿಂದ ಕಾರಜೋಳ ತಿಳಿಸಿದರು.




ಡಾ. ಬಿಆರ್ ಅಂಬೇಡ್ಕರ್‌ರವರು 1925ರ ಏಪ್ರಿಲ್ 10 ಮತ್ತು 11ರಂದು ದಲಿತರ ಉದ್ಧಾರಕ್ಕಾಗಿ ಹಮ್ಮಿ ಕೊಂಡಿದ್ದ ಬಹಿಷ್ಕೃತ ಹಿತ ಕಾರ್ಯಕಾರಿಣಿ ಸಭೆಯ ನೂರು ವರ್ಷದ ಸವಿ ನೆನಪಿಗಾಗಿ ಬಿಜೆಪಿವತಿಯಿಂದ ಹಮ್ಮಿಕೊಂಡಿದ್ದ ಭೀಮನ ಹೆಜ್ಜೆ ನೂರರ ಸಂಭ್ರಮ ರಥಯಾತ್ರೆಯೂ ಶುಕ್ರವಾರ ರಾತ್ರಿ ಚಿತ್ರದುರ್ಗಕ್ಕೆ ಆಗಮಿಸಿದಾಗ ನಗರದ ಒನಕೆ ಓಬವ್ವ ವೃತ್ತದಲ್ಲಿ ಹಮ್ಮಿಕೊಂಡಿದ್ದ ಬಹಿರಂಗ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಕಾಂಗ್ರೆಸ್ ರವರು ಮಹಾತ್ಮ ಗಾಂಧಿಜೀಯವರು ಬೆಳಗಾವಿಗೆ ಬಂದಿದ್ದರು ಎಂದು ಅದರ ಅಂಗವಾಗಿ 100 ವರ್ಷವಾಗಿದೆ ಎಂದು ಜನರ ತೆರಿಗೆ ಹಣದಲ್ಲಿ ಕಾಂಗ್ರೇಸ್ ಪಕ್ಷದ ಸಮಾರಂಭವನ್ನು ಅದ್ದೂರಿಯಾಗಿ ಮಾಡಿದ್ದಾರೆ. ಈ ಸಮಯದಲ್ಲಿ ಅವರಿಗೆ ಬಾಬಾ ಸಾಹೇಬ್ ಅಂಬೇಡ್ಕರ್ ರವರ ನೆನಪು ಬರಲಿಲ್ಲ, ಆದರೆ ಬಾಬಾ ಸಾಹೇಬ್ ರವರ ಹೆಸರಿನಲ್ಲಿ ಮತಗಳು ಬೇಕು ಆದರೆ ಸ್ಮರಣೆ ಮಾಡುವಂತ ಕಾರ್ಯ ಮಾತ್ರ ಬೇಡವಾಗಿದೆ. 1952ರ ನಡೆದ ದೇಶದ ಪ್ರಥಮ ಚುನಾವಣೆಯಲ್ಲಿ ಅಂಬೇಡ್ಕರ್‌ರವರು ಸ್ಪರ್ದೆ ಮಾಡಿದ್ದರು ಆದರೆ ಇವರನ್ನು ಸೋಲಿಸಿದವರು ಪಂಡಿತ್ ಜವಾಹರಲಾಲ್ ನೆಹರು ರವರು ಇದೇ ರೀತಿ ಎರಡನೇ ಚುನಾವಣೆಯಲ್ಲಿಯೂ ಸಹಾ ಜವಾಹರಲಾಲ್ ನೆಹರುರವರು ಅಂಬೇಡ್ಕರ್ ರವರನ್ನು ಸೋಲಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಇದರ ಸಂಭ್ರಮವನ್ನು ಕಾಂಗ್ರೆಸ್ ಆಚರಣೆ ಮಾಡಿದೆ ಎಂದರು. ಜವಾಹರಲಾಲ್ ನೆಹರುರವರ ಹೆಸರಿನಲ್ಲಿ ಪಂಡಿತ್ ಇತ್ತು ಆದರೆ ಪಾಂಡಿತ್ಯ ಇರಲ್ಲಿಲ್ಲ ಪಾಂಡಿತ್ಯ ಇದ್ದದು ಅಂಬೇಡ್ಕರ್‌ರವರಲ್ಲಿ ಈ ಭಯದಿಂದ ಅಂಬೇಡ್ಕರ್‌ರವರನ್ನು ಲೋಕಸಭೆಗೆ ಆಯ್ಕೆಯಾಗಲು ಕಾಂಗ್ರೆಸ್ ಕುತಂತ್ರದಿಂದ ಬಿಡಲಿಲ್ಲ, ಅವರಿಗೆ ಸರಿಯಾದ ರೀತಿಯ ಖಾತೆಯನ್ನು ಅಂದಿನ ಕಾಂಗ್ರೆಸ್ ಪಕ್ಷ ನೀಡದೇ ಯಾವುದೋ ಒಂದು ಕಿತ್ತು ಹೋದ ಖಾತೆಯನ್ನು ನೀಡಿ ಅವಮಾನ ಮಾಡಿದರು. ಜವಾಹರಲಾಲ್ ನೆಹರುರವರು ಅಂಬೇಡ್ಕರ್ ರವರ ತಮ್ಮ ಖಾತೆಯಿಂದ ರಾಜೀನಾಮೆಯನ್ನು ನಿಡುವಂತ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದವರು ನೆಹರು ರವರು, ಹೆಜ್ಜೆ ಹೆಜ್ಜೆಗೂ ಸಹಾ ಅವರನ್ನು ಅವಮಾನ ಮಾಡಿದರು. ದೇಶದ ಜನರಿಗಾಗಿ ತಮ್ಮ ಜೀವನವನ್ನು ನೀಡಿದರು. ಸಂವಿಧಾನ ಇರುವುದರಿಂದಲೇ ಸಾಮಾನ್ಯ ವ್ಯಕ್ತಿ ದೇಶದ ಪ್ರಧಾನಿಯಾಗಲು ಸಾಧ್ಯವಾಯಿತೆಂದು ದೇಶದ ಪ್ರಧಾನ ಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ ಎಂದರು.ಪಂಡಿತ್ ಜವಾಹರಲಾಲ್ ನೆಹರು ಕುಟುಂಬದವರೆಲ್ಲಾ ಭಾರತ ರತ್ನ ಪ್ರಶಸ್ತಿಯನ್ನು ಪಡೆದುಕೊಂಡರು ಆದರೆ ದೇಶಕ್ಕಾಗಿ ಸಂವಿಧಾನವನ್ನು ನೀಡಿದಂತ ಹಾಗೂ ಬಡವರಿಗಾಗಿ ತಮ್ಮ ಜೀವನವನ್ನು ಸವೆಸಿದ ಅಂಬೇಡ್ಕರ್ ರವರಿಗೆ ಜೀವಿತ ಅವಧಿಯಲ್ಲಿ ನೀಡಲಿಲ್ಲ. ಇದನ್ನು ವಿ.ಪಿ.ಸಿಂಗ್ ರವರು ನೀಡಿದರು. ಕರ್ನಾಟಕದಲ್ಲಿ ದಲಿತ ಮುಖ್ಯಮಂತ್ರಿಯಾಗಬೇಕೆಂದು ಕೂಗು ಬಹಳ ವರ್ಷದಿಂದ ಎದ್ದಿದೆ ಆದರೆ ಇದುವರೆವಿಗೂ ರಾಜ್ಯದ ಮುಖ್ಯಮಂತ್ರಿ ದಲಿತರಾಗಿಲ್ಲ ಖರ್ಗೆಯವರು ಮುಖ್ಯಮಂತ್ರಿಯಾಗುವ ಎಲ್ಲಾ ರೀತಿಯ ಅರ್ಹತೆ ಇದ್ದರೂ ಸಹಾ ಕಾಂಗ್ರೆಸ್ ಅವರನ್ನು ಮುಖ್ಯಮಂತ್ರಿಯನ್ನು ಮಾಡಲಿಲ್ಲ, ಸಿದ್ದರಾಮಯ್ಯ ಸರ್ಕಾರ ದಲಿತರಿಗೆ ಮೋಸ ಮಾಡುತ್ತಿದೆ, ಇದರ ಬಗ್ಗೆ ಎಚ್ಚೆತ್ತುಕೊಂಡು ಹೋರಾಟವನ್ನು ಮಾಡಬೇಕಿದೆ ಎಂದು ಸಂಸದ ಗೋವಿಂದ ಕಾರಜೋಳ ತಿಳಿಸಿದರು.

ಮಾಜಿ ಸಂಸದರಾದ ಜನಾರ್ಧನ ಸ್ವಾಮಿ ಮಾತನಾಡಿ, ಇತಿಹಾಸದಲ್ಲಿ ಅಂಬೇಡ್ಕರ್ ರವರು ದೇಶ ಮಾತ್ರವಲ್ಲ ಪ್ರಪಂಚ ಕಂಡು ಅದ್ಬುತ ನಾಯಕರಾಗಿದ್ದಾರೆ. ಈ ವ್ಯಕ್ತಿಯನ್ನು ಜಗತ್ತು ಗುರುತ್ತಿಸುತ್ತಿದೆ. ಬೇರೆ ದೇಶಗಳಿಗೆ ಅಂಬೇಡ್ಕರ್ವ ರವರು ಮಾದರಿಯಾಗಿದ್ದಾರೆ. ವಿದೇಶದಲ್ಲಿ ಶಿಕ್ಷಣವನ್ನು ಪಡೆದು ಶೋಷಿತ ವರ್ಗಕ್ಕೆ ಮಾದರಿಯಾಗಿದ್ದಾರೆ. ದೊಡ್ಡದಾದ ಮರವಾಗಿ ಭಾರತ ದೇಶದಲ್ಲಿ ಎಲ್ಲರಿಗೂ ದಾರಿ ದೀಪವಾಗಿದ್ದಾರೆ. ಅಂಬೇಡ್ಕರ್ ರವರಿಗೆ ಕಾಂಗ್ರೆಸ್ ದ್ರೋಹವನ್ನು ಮಾಡಿದೆ ಎಂಬುದರ ಬಗ್ಗೆ ಜನರಿಗೆ ಗೊತ್ತಿದೆ, ಬಿಜೆಪಿ ಜನರ ಕಲ್ಯಾಣಕ್ಕೆ ಬದ್ದವಾಗಿದೆ ಎಂದರು.

ವಿಧಾನ ಪರಿಷತ್ ಸದಸ್ಯರಾದ ಕೆ.ಎಸ್.ನವೀನ್ ಮಾತನಾಡಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಸಮುದಾಯದವರು ಕಾರ್ಯಕ್ರಮದಲ್ಲಿ ಹೆಚ್ಚಿನ ಮತ್ತು ಅಂಬೇಡ್ಕರ್ ಹೆಸರು ಬಳಸಿಕೊಳ್ಳುವ ಕಾಂಗ್ರೆಸ್ ದಲಿತರಿಗೆ ಸೂಕ್ತ ಸ್ಥಾನಮಾನ, ಅವಕಾಶ ನೀಡಿಲ್ಲ. ಅಂಬೇಡ್ಕರ್ ಅವರನ್ನೂ ಗೌರವಯುತವಾಗಿ ನಡೆಸಿಕೊಳ್ಳಲಿಲ್ಲ. ಉರಿಯುವ ಮನೆಯಂತಿರುವ ಕಾಂಗ್ರೆಸ್ ಪಕ್ಷಕ್ಕೆ ಹೋಗದಂತೆ ಅಂದೇ ಅಂಬೇಡ್ಕರ್ ದಲಿತರಿಗೆ ಕಿವಿಮಾತು ಹೇಳಿದ್ದರು ಬಿಜೆಪಿ ಪಕ್ಷವು ಅಂಬೇಡ್ಕರ್ ಬಗ್ಗೆ ಅಪಾರ ಗೌರವ ಹೊಂದಿದ್ದು, ಅವರ ಆದರ್ಶ, ವಿಚಾರಗಳನ್ನು ತಿಳಿಸುವ ಪ್ರಯತ್ನವಾಗಿ ಕಾರ್ಯಕ್ರಮ ಹಮ್ಮಿಕೊಂಡಿದೆ ದೇಶ, ರಾಜ್ಯದಲ್ಲಿ ಅತಿ ಹೆಚ್ಚಿನ ಅವಧಿಗೆ ಕಾಂಗ್ರೆಸ್ ಅಧಿಕಾರ ಚಲಾಯಿಸಿದೆ. ರಾಜ್ಯದಲ್ಲಿ 200 ಹಾಸ್ಟೆಲ್‌ಗಳು ಹಾಗೂ 100 ವಸತಿಶಾಲೆಗಳಿಗೆ ಸ್ವಂತ ಕಟ್ಟಡಗಳಿಲ್ಲ ಬೆಳಗಾವಿಯಲ್ಲಿ ಮಹಾತ್ಮಗಾಂಧಿ ಅಧ್ಯಕ್ಷತೆಯಲ್ಲಿ ಎಐಸಿಸಿ ಅಧಿವೇಶನ ನಡೆದು 100 ವರ್ಷ ತುಂಬಿದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಸಮಾವೇಶ ಏರ್ಪಡಿಸಿತ್ತು ಇದರಲ್ಲಿ ಅಂಬೇಡ್ಕರ್ ರವರ ಬಗ್ಗೆ ಯಾವ ಮಾತನ್ನು ಸಹಾ ಕಾಂಗ್ರೆಸ್ ಆಡಿಲ್ಲ, ಅಂಬೇಡ್ಕರ್ ರವರನ್ನು ಕಾಂಗ್ರೆಸ್ ಬರಿ ಮತ ಬ್ಯಾಂಕಿಗಾಗಿ ಉಪಯೋಗ ಮಾಡಿಕೊಳ್ಳುತ್ತಿದೆ ಅವರ ವಿಚಾರವನ್ನು ಜನತೆಗ ಮುಟ್ಟಿಸುವ ಕಾರ್ಯವನ್ನು ಕಾಂಗ್ರೆಸ್ ಮಾಡುತ್ತಿಲ್ಲ ಎಂದು ದೂರಿದರು.

ಶಾಸಕರಾದ ಸಿಮೆಂಟ್ ಮಂಜು ಮಾತನಾಡಿ ಬಿಜೆಪಿ ಪಕ್ಷದವತಿಯಿಂದ ಅಂಬೇಡ್ಕರ್ ಅವರ ಸ್ಮಾರಕಗಳನ್ನು ನಿರ್ಮಿಸಿ ಅವರ ತತ್ವಗಳನ್ನು ಇಂದಿನ ಯುವ ಪೀಳಿಗೆಗೆ ಸಾರಲು ತೀರ್ಮಾನಿಸಿದೆ ಅಂಬೇಡ್ಕರ್ ಅವರಿಗೆ ಕಾಂಗ್ರೆಸ್ ಮಾಡಿರುವ ಅವಮಾನಗಳ ಬಗ್ಗೆ ಸಾರ್ವಜನಿಕರಿಗೆ ತಿಳಿಸಲು ಬಿಜೆಪಿ ಪಕ್ಷವು ಮುಂದಾಗಿದ್ದು ಈ ಹಿನ್ನಲೆಯಲ್ಲಿ ಈ ಕಾರ್ಯಕ್ರಮವವನ್ನು ಆಯೋಜಿಸಲಾಗಿದ್ದು 15 ರಂದು ನಿಪ್ಪಾಣಿಯಲ್ಲಿ ಬೃಹತ್ ಕಾರ್ಯಕ್ರಮವವನ್ನು ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೋಲಾರದ ಮಾಜಿ ಸಂಸದರಾದ ಮುನಿಸ್ವಾಮಿ ಹಾಗೂ ಎಸ್.ಸಿ. ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿಯಾದ ಉಮೇಶ್ ಕಾರಜೋಳ್ ಹಾಗೂ ಮಹೇಂದ್ರ ಜಿಲ್ಲಾ ಅಧ್ಯಕ್ಷರಾದ ಮುರಳಿ ಎಸ್.ಸಿ.ಮೋರ್ಚಾ ಮುಖಂಡರಾದ ದೀಪ ಶ್ರೀನಿವಾಸ್, ಮಲ್ಲಿಕಾರ್ಜನ್, ಕೆ.ಟಿ.ಕುಮಾರಸ್ವಾಮಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂಪತ್ ಕುಮಾರ್, ನಗರಾಧ್ಯಕ್ಷರಾದ ಲೋಕೇಶ್ ಗ್ರಾಮಾಂತರ ಅಧ್ಯಕ್ಷರಾದ ನಾಗರಾಜ್, ಚಾಲುಕ್ಯ ನವೀನ್ ರಾಮದಾಸ್, ಮುಖಂಡರಾದ ಮೋಹನ್, ವಕ್ತರರಾದ ನಾಗರಾಜ್ ಬೇದ್ರೇ, ದಗ್ಗೆ ಶಿವಪ್ರಕಾಶ್ ಶಂಭು, ರವಿ ಮಹಾಂತಣ್ಣ, ಲೋಹಿತ್ ,ಭಾರ್ಗವಿ ದ್ರಾವಿಡ್, ಶ್ರೀನಿವಾಸ್ ಮತ್ತು ಮೋಹನ್ ಉಪಸ್ಥಿತರಿದ್ದರು.

## ಭೀಮ ರಥಯಾತ್ರೆ ನಿಮಿತ್ತ ಟಿ ಶರ್ಟ್ ಬಿಡುಗಡೆ

» ಚಿತ್ರದುರ್ಗ

ಚಿತ್ರದುರ್ಗದ ನಗರಕ್ಕೆ ಆಗಮಿಸಿದ ಭೀಮ ಹೆಜ್ಜೆ ರಥಯಾತ್ರೆಯ ಜೊತೆಗೆ ಆಗಮಿಸಿದ ನಾಯಕರುಗಳು ಏ. 12ರ ಬೆಳಿಗ್ಗೆ ಮದಕರಿ ನಾಯಕ ವೃತ್ತದಲ್ಲಿನ ವೀರಮದಕರಿ ನಾಯಕ ಪ್ರತಿಮೆಗೆ ಪುಷ್ಪ ನಮನ ಮಾಡಿ ಗೌರವ ಸಲ್ಲಿಸಿದರು. ಈ ಸಂದರ್ಭದಲ್ಲಿ ಭೀಮ ಹೆಜ್ಜೆ ರಥಯಾತ್ರೆಯ ಅಂಗವಾಗಿ ಭೀಮ ಹೆಜ್ಜೆಯ " ಟೀ ಶರ್ಟ್ "ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಕೋಲಾರದ ಮಾಜಿ ಸಂಸದರಾದ ಮುನಿಸ್ವಾಮಿ ಹಾಗೂ ಎಂಎಲ್ಸಿ ಕೆ ಎಸ್ ನವೀನ್ ಎಸ್ ಸಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿಯಾದ ಉಮೇಶ್ ಕಾರಜೋಳ್ ಹಾಗೂ ಮಹೇಂದ್ರ ಜಿಲ್ಲಾ ಅಧ್ಯಕ್ಷರಾದ ಮುರಳಿ ಎಸ್ ಸಿ ಮೋರ್ಚಾ ಮುಖಂಡರಾದ ದೀಪ ಶ್ರೀನಿವಾಸ್, ಲೋಹಿತ್ ,ಭಾರ್ಗವಿ ದ್ರಾವಿಡ್, ಶ್ರೀನಿವಾಸ್ ಮತ್ತು ಮೋಹನ್ ಉಪಸ್ಥಿತರಿದ್ದರು




## ಪ್ರವಾಸಿ ಮಂದಿರದಲ್ಲಿ ನಡೆದ ಕರ್ನಾಟಕ ಮಾನವ ಹಕ್ಕುಗಳ ಜನಜಾಗೃತಿ ಸಭೆ



» ಚಿತ್ರದುರ್ಗ

ಪ್ರಜಾಪ್ರಭುತ್ವದಲ್ಲಿ ಸಮಸ್ತ ಪ್ರಜೆಗಳು ಹಕ್ಕಿಗಾಗಿ ಹೋರಾಡುವುದೇ ಜೀವನದ ಗುರಿ ಎಂದು ಕರ್ನಾಟಕ ಮಾನವ ಹಕ್ಕುಗಳ ಜನಜಾಗೃತಿ ಸಮಿತಿ ಸಂಸ್ಥಾಪಕ ಅಧ್ಯಕ್ಷ ಜ್ಞಾನ ಪ್ರಕಾಶ್ ತಿಳಿಸಿದರು.

ಪ್ರವಾಸಿ ಮಂದಿರದಲ್ಲಿ ನಡೆದ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದರು. ಬಹುತ್ವದ ಹಾದಿಯಲ್ಲಿ ಸಾಗುತ್ತಿರುವ ನಾಗರಿಕ ಪಥದಲ್ಲಿ ಸರ್ಕಾರದಿಂದ ಸಿಗುವ ವಿವಿಧ ಸೌಲತ್ತುಗಳನ್ನು ಹೇಗೆ ಪಡೆದುಕೊಳ್ಳಬೇಕೆಂಬ ಸಾಮಾನ್ಯ ಅರಿವು ಮುಖ್ಯ.ಪ್ರಜಾಪ್ರಭುತ್ವದಡಿ ಪ್ರಜೆಗಳಿಗಾಗಿ ರಚಿಸಿಕೊಂಡಿರುವ ಸರ್ಕಾರದಲ್ಲಿ ನಾವೆಲ್ಲಾ ಹಕ್ಕುದಾರ ಫಲಾನುಭವಿಗಳು ಎಂದು ಹೇಳಿದರು.ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ(ವಾಸುದೇವ ಮೇಟಿ) ಯ ಲಕ್ಷ್ಮಿಕಾಂತ್, ಲೋಲಾಕ್ಷಮ್ಮ, ಶ್ರೀಧರ್‌ರೆಡ್ಡಿ, ರಂಗಸ್ವಾಮಿ, ಹಿರಿಯೂರಿನ ನಿಜಲಿಂಗಪ್ಪತಿಮ್ಮಣ್ಣ, ರಾಜ್‌ಕುಮಾರ್, ಅಂಜಿನಪ್ಪ ಇನ್ನು ಅನೇಕರು ಮಾನವ ಹಕ್ಕುಗಳ ಜನಜಾಗೃತಿ ಸಮಿತಿ ಸದಸ್ಯರುಗಳಾದರು.ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಪದ್ಮ, ಉಪಾಧ್ಯಕ್ಷೆ ಜ್ಯೋತಿ, ಲೇಖಕ ಹೆಚ್. ಆನಂದಕುಮಾರ್ ಈ ಸಂದರ್ಭದಲ್ಲಿದ್ದರು.

## ಏ 15ಕ್ಕೆ ವಿಶ್ವಕಲಾ ದಿನಾಚರಣೆ

ಚಿತ್ರದುರ್ಗ : ಲಲಿತ ಕಲಾ ಅಕಾಡೆಮಿ ಹಾಗೂ ಚಿತ್ರ ಕಲಾವಿದರ ಬಳಗದಿಂದ ಏ.15ರಂದು ವಿಶ್ವಕಲಾ ದಿನಾಚರಣೆ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಕೋಟೆ ಮುಂಭಾಗದ ಮಯೂರ ಯಾತ್ರಿ ನಿವಾಸದ ಸಭಾಂಗಣದಲ್ಲಿ ಅಂದು ಬೆಳಿಗ್ಗೆ 10.30ಕ್ಕೆ ಲಲಿತಕಲಾ ಅಕಾಡೆಮಿ ಸದಸ್ಯ ಸಿ.ಕಣ್ಮೇಶ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಾಹಿತಿ ಡಾ.ಸಂಗೇನಹಳ್ಳಿ ಅಶೋಕ್ ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಿ.ಎಂ.ಗುರುನಾಥ್, ಚಿತ್ರ ಕಲಾವಿದ ದಾದಾಪೀರ್ ಭಾಗವಹಿಸಲಿದ್ದಾರೆ.

## ಟಾಸ್ಕ್ ಪೋರ್ಸ್ ಸಭೆ

ದಾವಣಗೆರೆ: ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಬಿಳಿ ಜೋಳ, ಭತ್ತ ಖರೀದಿಗೆ ಸಂಬಂಧಿಸಿದಂತೆ ಟಾಸ್ಕ್‌ಪೋರ್ಸ್ ಸಮಿತಿ ಸಭೆಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಏ. 15 ರಂದು ಆಯೋಜಿಸಲಾಗಿದೆ.

ಪ್ರಮುಖ ಸುದ್ದಿ

# ವಿಜೃಂಭಣೆಯಿಂದ ನಡೆದ ವೀರಭದ್ರ ದೇವರ ಗುಗ್ಗುಳ

» ಚಿತ್ರದುರ್ಗ ಏ. 12

ನಗರದ ಹೊಳಲ್ಕೆರೆ ರಸ್ತೆಯ ಶ್ರೀ ನೀಲಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿನ ವೀರಶೈವ ಸಮಾಜ (ರಿ.) ದವತಿಯಿಂದ ಶನಿವಾರ ಶ್ರೀ ವೀರಭದ್ರ ದೇವರ ಗುಗ್ಗುಳ ಮತ್ತು ಅಗ್ನಿಕುಂಡ ಕಾರ್ಯಕ್ರಮವನ್ನು ವಿಭೃಂಭಣೆ ಯಿಂದ ನಡೆಸಲಾಯಿತು.

ನಗರದ ರಂಗಯ್ಯನ ಬಾಗಿಲ ಬಳಿಯಲ್ಲಿನ ಉಜ್ಜಯಿನಿ ಮಠದಲ್ಲಿ ಗಂಗಾಪೂಜೆಯ ನಂತರ ಗುಗ್ಗುಳದ ಮೆರವಣಿಗೆಯು ರಂಗಯ್ಯನಬಾಗಿಲು, ದೊಡ್ಡಪೇಟೆ, ಚಿಕ್ಕಪೇಟೆ, ಆನೆಬಾಗಿಲು, ಮಹಾತ್ಮಗಾಂಧಿ ವೃತ್ತದ ಮುಖಾಂತರವಾಗಿ ಶ್ರೀ ನೀಲಕಂಠೇಶ್ವರಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ನಿರ್ಮಾಣ ಮಾಡಲಾದ ಅಗ್ನಿಕುಂಡ ಹಾಯುವುದರ ಮೂಲಕ



ಸಮಾಪ್ತಿ ಮಾಡಿ ವೀರಭದ್ರ ಸ್ವಾಮಿಗೆ ಮಹಾಮಂಗಳಾರತಿಯ ನಂತರ ಮೆರವಣಿಗೆಯ ಮೂಲಕ ಆಗಮಿಸಿದ ಭಕ್ತರಿಗೆ ದಾಸೋಹ ಏರ್ಪಡಿಸಲಾಗಿತ್ತು.

ಗುಗ್ಗಳದ ಮೆರವಣಿಗೆಯಲ್ಲಿ ದಾರಿಯುದ್ದಕ್ಕೂ ಹರಪನಹಳ್ಳಿ ಪಟ್ಟಣದ ಮೇಗಳಪೇಟೆ ಶ್ರೀ ಗುಗ್ಗುಳ ವೀರಭದ್ರೇಶ್ವರ ದೇವಸ್ಥಾನ ಸಮಿತಿಯವರು ವೀರಭದ್ರನ ಪರಾಕ್ರಮದ ಬಗ್ಗೆ ಒಡಪುಗಳನ್ನು ಅಲಲ್ಲಿ ಹೇಳುವುದರ ಮೂಲಕ ಭಕ್ತರಿಗೆ ವೀರಭದ್ರನ ಸಾಹದ ಕಥೆಗಳನ್ನು ಪರಿಚಯ ಮಾಡಿಕೊಟ್ಟರು. ಈ ಸಂದರ್ಭದಲ್ಲಿ ಭಾಗವಹಿಸಿದ್ದ ಶಿವಸಿಂಪಿ ಮಹಿಳಾ ಘಟಕದ ಪದಾಧಿಕಾರಿಗಳು ಕೆಂಪು ಸೀರೆಯನ್ನು ಧರಿಸಿ ತಲೆಯ ಮೇಲೆ ಕುಂಭವನ್ನು ಇಟ್ಟುಕೊಂಡು ಮೆರವಣಿಗೆಯಲ್ಲಿ ಸಾಗುತ್ತಿದ್ದ ದೃಶ್ಯ ಕಂಡು ಬಂದಿತು.

ಗುಗ್ಗುಳ ಮೆರವಣಿಗೆ ಬರುವ ದಾರಿಯಲ್ಲಿನ ಭಕ್ತರ ಮನೆಗಳ ಮುಂದೆ ರಸ್ತೆಯನ್ನು ಗುಡಿಸಿ ನೀರನ್ನು ಹಾಕಿ ರಂಗೋಲಿಯನ್ನು ಬಿಡಿಸಿ ಗುಗ್ಗಳವನ್ನು ಸ್ವಾಗತಿಸಿದರು ಇದ್ದಲ್ಲದೆ ಕೆಲವು ಭಕ್ತರು ತಮ್ಮ ಮನೆಗಳ ಮುಂದೆ ಗುಗ್ಗಳದಲ್ಲಿ ಆಗಮಿಸಿದವರು ಮಜ್ಜಿಗೆ, ನೀರು, ಪಾನಕವನ್ನು ನೀಡಿದರು. ಈ ಸಂದರ್ಭದಲ್ಲಿ ವೀರಶೈವ ಸಮಾಜದ ಪದಾಧಿಕಾರಿಗಳು ಸಮಾಜದ ಮುಖಂಡರು ಮಹಿಳೆಯರು ಮಕ್ಕಳು ಭಾಗವಹಿಸಿದ್ದರು. ದಾರಿಯಲ್ಲಿ ಮಹಿಳೆಯರು, ಮಕ್ಕಳು ಸರದಿ ಸಾಲಿನಲ್ಲಿ ಕುಳಿತು ಅವರ ತಲೆಯ ಮೇಲೆ ವೀರಭದ್ರ ಸ್ವಾಮಿಯ ಅಗ್ನಿಕುಂಡವನ್ನು ಹಾಯುವುದರ ಮೂಲಕ ಸ್ವಾಮಿಯ ಕೃಪೆಗೆ ಪಾತ್ರರಾದರು.

## ಫಾಸ್ಟ್ ನ್ಯೂಸ್

### ತಿಪ್ಪೇಸ್ವಾಮಿಗೆ ಪಿಎಚ್‌ಡಿ

» **ಚಿತ್ರದುರ್ಗ**



ಜಾಲಿಕಟ್ಟೆಯ ತಿಪ್ಪೇಸ್ವಾಮಿ ಬಿ. ಇವರಿಗೆ ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಪಿ.ಎಚ್.ಡಿ.ಪದವಿ ನೀಡಿ ಗೌರವಿಸಲಾಗಿದೆ. ದೇಜಗೌ ಮತ್ತು ಹಾ.ಮಾ.ನಾಯಕ ಅವರ ಬರಹಗಳಲ್ಲಿ ನಾಡು-ನುಡಿ ನಾಡವರ ಚಿಂತನೆ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಡಾ.ರೋಲೇಕರ್ ನಾರಾಯಣರವರ ಮಾರ್ಗದರ್ಶನದಲ್ಲಿ ಮಂಡಿಸಿದ ಪ್ರಬಂಧಕ್ಕೆ ಪಿ.ಎಚ್.ಡಿ. ಲಭಿಸಿದೆ.

### ಬೇಸಿಗೆ ಶಿಬಿರ ಮುಕ್ತಾಯ



» **ಚಳ್ಳಕೆರೆ**

ನಗರದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿವಿದ್ಯಾಲಯದಲ್ಲಿ ಮಕ್ಕಳಿಗಾಗಿ ಹಮ್ಮಿಕೊಂಡಿದ್ದ ಬೇಸಿಗೆ ಶಿಬಿರ ಮುಕ್ತಾಯವಾಗಿದ್ದು ಶಿಬಿರದಲ್ಲಿ ಸರ್ವಾಂಗಿಣ ವ್ಯಕ್ತಿತ್ವ ವಿಕಸನ ಹಾಗೂ ಭಗವದ್ಗೀತೆಯ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಲಾಯಿತು ಎಂದು ಸಂಚಾಲಕಿ ವಿಮಲಕ್ಕ ತಿಳಿಸಿದರು. ಅವರು, ಬೇಸಿಗೆ ಶಿಬಿರದ ಸಮಾರೋಪಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿ, ಶಿಬಿರದಲ್ಲಿ ಭಾಗವಹಿಸಿದ್ದ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ವಿತರಿಸಿ, ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಿಮಾತನಾಡಿದರು.ಮಕ್ಕಳುಚಿಕ್ಕವಯಸ್ಸಿನಲ್ಲೇ ಅಭ್ಯಾಸ ಬಗ್ಗೆ ಹೆಚ್ಚು ಗಮನ ನೀಡಬೇಕಿದೆ. ಈ ಸಂದರ್ಭದಲ್ಲಿ ನಿಮಗೆ ಪ್ರತಿಯೊಂದು ವಿಚಾರವನ್ನು ಗ್ರಹಿಸುವ ಶಕ್ತಿ ಇರುತ್ತದೆ. ಕಲಿಕೆಯ ಸಂದರ್ಭದಲ್ಲಿ ನಿರ್ಲಕ್ಷ್ಯ ತೋರದಂತೆ ಹೆಚ್ಚು ಸಮಯವನ್ನು ವಿದ್ಯಾಭ್ಯಾಸಕ್ಕಾಗಿ ಮೀಸಲಿಡುವಂತೆ ಮನವಿ ಮಾಡಿದರು. ಪ್ರಜಾಪಿತಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದ ಪ್ರಮುಖರಾದ ಎಂ.ಎಸ್. ರಾಧ, ಓಂಕಾರಮ್ಮ, ಲಲಿತಮ್ಮ, ಚೂಡಾಮಣಿ ಮುಂತಾದವರು ಇದ್ದರು.

### ಬಿಎಂಸಿ ಕಟ್ಟಡಕ್ಕೆ ಉಚಿತ ನಿವೇಶನ: ಭೂಮಿಪೂಜೆ



» **ಚಳ್ಳಕೆರೆ**

ಶಿವಮೊಗ್ಗ ಹಾಲು ಒಕ್ಕೂಟದ ವ್ಯಾಪ್ತಿಯ ನೂತನ ಬಿಎಂಸಿ ನೂತನ ಕಟ್ಟಡಕ್ಕೆ ಕೆಎಂಎಫ್‌ನ ಜಿಲ್ಲಾ ನಿರ್ದೇಶಕ ಬಿ.ಸಿ.ಸಂಜೀವಮೂರ್ತಿ ತಮ್ಮ ನಿವೇಶನವನ್ನು ಉಚಿತವಾಗಿ ನೀಡಿದ್ದಲ್ಲದೆ, ಕಟ್ಟಡ ಭೂಮಿಪೂಜೆಯನ್ನುಭಾನುವಾರನೆರವೇರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಶಿವಮೊಗ್ಗ ಹಾಲುಒಕ್ಕೂಟ ತನ್ನ ಕಾರ್ಯವ್ಯಾಪ್ತಿಯಲ್ಲಿ ವಿಸ್ತರಿಸುತ್ತಿದ್ದು, ರೈತ ಸಮುದಾಯಕ್ಕೆ ಹೆಚ್ಚಿನ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಈ ಭಾಗದಲ್ಲಿ ನೂತನ ಬಿಎಂಸಿ ಕಟ್ಟಡ ನಿರ್ಮಾಣಕ್ಕೆ ತೀರ್ಮಾನಿಸಲಾಗಿತ್ತು. ನಿವೇಶನದ ಅವಶ್ಯಕತೆ ಇದ್ದು, ಬೆಂಗಳೂರು ರಸ್ತೆಯ ವಾರಿಯರ್ಸ್ ಶಾಲೆ ಹಿಂಭಾಗದ ಸಾಯಿ ಹನುಮಾನ್ ಲೇಔಟ್‌ನಲ್ಲಿ ನಿವೇಶನವನ್ನು ನೀಡಲಾಗಿದೆ. ನೂತನ ಬಿಎಂಸಿ ಕಟ್ಟಡದಲ್ಲಿ ನರಹರಿ ನಗರದ ಹಾಲು ಉತ್ಪಾದಕರ ಸಂಘದ ಸುಮಾರು 5 ಸಾವಿರ ಲೀಟರ್ ಸಾಮರ್ಥ್ಯದ ಹಾಲನ್ನು ಸಂಗ್ರಹಿಸಿ ವಿತರಣೆ ಮಾಡಬಹುದಾಗಿದೆ ಎಂದರು. ಪಶುವೈದ್ಯಾಧಿಕಾರಿ ಡಾ.ನರೇಶ್, ಡಾ.ಪುನೀತ್, ಸಂಘದ ನಿರ್ದೇಶಕ ಬಿ.ಎಸ್. ಕಾರ್ತಿಕ್, ಸಿದ್ದಾಪುರ ಶೇಖರಪ್ಪ, ನಿರಂಜನ, ಕಾರ್ಯದರ್ಶಿ ಸ್ವರೂಪ್ ಉಪಸ್ಥಿತರಿದ್ದರು.

### 10 ಕೆ.ಜಿ. ಅಕ್ಕಿ ವಿತರಣೆ

» **ಚಿತ್ರದುರ್ಗ**

ರಾಜ್ಯ ಸರ್ಕಾರದ ಮಹಾತ್ವಾಕಾಂಕ್ಷೆ ಐದು ಗ್ಯಾರಂಟಿ ಯೋಜನೆಯಲ್ಲಿ ಒಂದಾದ ಅನ್ನಭಾಗ್ಯ ಯೋಜನೆಯಡಿ ಪ್ರತಿ ಸದಸ್ಯರಿಗೆ ರೂ.170/-ರಂತೆ ಡಿಬಿಟಿ ಮುಖಾಂತರ ಹಣ ಪಾವತಿಸಲಾಗುತ್ತಿರುತ್ತದೆ. ಫೆಬ್ರವರಿ-2025ರ ಮಾಹೆಯಿಂದ ಪ್ರತಿ ಸದಸ್ಯರಿಗೆ ರೂ.170/-ರ ಡಿಬಿಟಿ ಹಣ ಬದಲಾಗಿ 05 ಕೆ.ಜಿ.ಅಕ್ಕಿಯನ್ನು ವಿತರಿಸಲು ತೀರ್ಮಾನಿಸಲಾಗಿರುತ್ತದೆ. ಪ್ರಯುಕ್ತ ಏಪ್ರಿಲ್-2025ರ ಮಾಹೆಯ ಆಹಾರಧಾನ್ಯ ಬಿಡುಗಡೆಯಾಗಿದ್ದು, ಏಪ್ರಿಲ್-2025ರ ಮಾಹೆಯಲ್ಲಿ ಆದ್ಯತಾ (ಬಿಪಿಎಲ್) ಪಡಿತರ ಚೀಟಿದಾರರಿಗೆ ಪ್ರತಿ ಸದಸ್ಯರಿಗೆ 10 ಕೆ.ಜಿ.ಅಕ್ಕಿ ಹಾಗೂ ಅಂತ್ಯೋದಯ ಎಎವೈ ಪಡಿತರ ಚೀಟಿದಾರರಿಗೆ 01 ರಿಂದ 03 ಸದಸ್ಯರಿಗೆ 35 ಕೆ.ಜಿ.ಅಕ್ಕಿ, 04 ಸದಸ್ಯರಿಗೆ 40 ಕೆ.ಜಿ.ಅಕ್ಕಿ, 05 ಸದಸ್ಯರಿಗೆ 50 ಕೆ.ಜಿ.ಅಕ್ಕಿ, 06 ಸದಸ್ಯರಿಗೆ 60 ಕೆ.ಜಿ.ಅಕ್ಕಿ, 07 ಸದಸ್ಯರಿಗೆ 70 ಕೆ.ಜಿ.ಅಕ್ಕಿ, 08 ಸದಸ್ಯರಿಗೆ 80 ಕೆ.ಜಿ.ಅಕ್ಕಿ, 09 ಸದಸ್ಯರಿಗೆ 90 ಕೆ.ಜಿ.ಅಕ್ಕಿ ಹಾಗೂ 10 ಸದಸ್ಯರಿಗೆ 100 ಕೆ.ಜಿ ಅಕ್ಕಿ, ಮುಂದುವರೆದು 10ಕ್ಕಿಂತ ಮೇಲ್ಪಟ್ಟ ಪಡಿತರ ಚೀಟಿಗೆ ಇದೇ ಅನುಪಾತದಂತೆ ಅಕ್ಕಿ ವಿತರಣೆ ಮಾಡಲಾಗುತ್ತದೆ.

# ಏಕನಾಥೇಶ್ವರಿಯ ಸಿಡಿ ವೀಕ್ಷಿಸಲು ಬಂದ ಗಂಗೆ; ಮಳೆಯನ್ನು ಲೆಕ್ಕಿಸದೆ ಸಿಡಿಯನ್ನಾಡಿದ ಭಕ್ತರು





» **ಚಿತ್ರದುರ್ಗ**

ಐತಿಹಾಸಿಕ ಚಿತ್ರದುರ್ಗದ ಮೇಲುದುರ್ಗದಲ್ಲಿರುವ ಶ್ರೀ ಏಕನಾಥೇಶ್ವರಿ ಅಮ್ಮನವರ ಜಾತ್ರಾ ಮಹೋತ್ಸವವು ಅಂಗವಾಗಿ ನಗರದ ಕೋಟೆ ರಸ್ತೆಯಲ್ಲಿನ ಪಾದಗುಡಿಯ ಬಳಿಯಲ್ಲಿನ ಶನಿವಾರ ನಡೆದಏಕನಾಥೇಶ್ವರಿದೇವಿಸಿಡಿಉತ್ಸವದಲ್ಲಿ ಸಾವಿರಾರು ಭಕ್ತರು ಭಾಗವಹಿಸಿದ್ದರು. ಇದೇ ಪ್ರಥಮ ಬಾರಿಗೆ ಸಿಡಿ ಉತ್ಸವದಲ್ಲಿ ಮಳೆ ಬಂದಿದ್ದು, ಅದರಲ್ಲೂ ಸಹಾ ಭಕ್ತ ಸಮೂಹ ಸಿಡಿಯನ್ನು ಆಡಿದರು, ಇದನ್ನು ವೀಕ್ಷಿಸಲು ಬಂದಿದ್ದ ಭಕ್ತರೂ ಸಹಾ ಮಳೆಯನ್ನು ಲೆಕ್ಕಿಸದೆ ಸಿಡಿಯನ್ನು ವೀಕ್ಷಣೆ ಮಾಡಿದರು. ಏ,01ರಂದು ಅಮ್ಮನವರ ಜಾತ್ರೆಯ ಸಾರು ಹಾಕಿದ್ದು, ಏ.05 ರಂದು ಕಂಕಣಧಾರಣೆ, ಭಂಡಾರ ಪೂಜೆ ಮತ್ತು ರುದ್ರಾಭಿಷೇಕ, ಏ.06ರ ರಾತ್ರಿ ರಾಜಬೀದಿಗಳಲ್ಲಿ ಸಿಂಹವಾಹಿನಿ ಉತ್ಸವ, ಏ.07ರಂದು ಸರ್ಪೋತ್ಸವದೊಂದಿಗೆ ಭಕ್ತರ ಮನೆಗಳಲ್ಲಿ ಪೂಜಾ ಕಾರ್ಯಕ್ರಮ ಮಯುರೋತ್ಸವ (ನವಿಲು ಉತ್ಸವ) ಏ.09ರಂದು ಬೆಟ್ಟದಿಂದ ಅಮ್ಮನವರು ಕೆಳಗೆ ಇಳಿದಿದ್ದು, ಏ.10ರಂದು ಕರುವಿನಕಟ್ಟೆ ಭಕ್ತಾಧಿಗಳಿಂದ ಸೇವೆ, ಉತ್ಸವ. ಏ.11ರಂದು ಅಕ್ಷೋತ್ಸವ ಮತ್ತು ಹೂವಿನ ಉತ್ಸವ ಮಹಾ ಮಂಗಳಾರತಿ ಕಾರ್ಯಕ್ರಮ ನಡೆಯಿತು.

ಇಲ್ಲಿನ ಗ್ರಾಮ ದೇವತೆ ಏಕನಾಥೇಶ್ವರಿ ದೇವಿಯ ಸಿಡಿ ಉತ್ಸವ ಶನಿವಾರ ಸಂಜೆ ವಿಜೃಂಭಣೆಯಿಂದ ನೆರವೇರಿತು. ಸಂಜೆಯ ಗೋಧೂಳಿ ಸಮಯ ಆರಂಭವಾಗುತ್ತಿದ್ದಂತೆ ಸಿಡಿ ಉತ್ಸವದ ಸಾಂಪ್ರದಾಯಿಕ ಕಾರ್ಯಕ್ರಮಗಳು ನಡೆದವು. ಸಂಜೆ ಪಶ್ಚಿಮ ದಿಗಂತ ಕೆಂಪಾಗುತ್ತಿದ್ದಂತೆ ಏಕನಾಥೇಶ್ವರಿ ದೇವಿಯ ಪವಿತ್ರ ಕಳಶ ಮತ್ತು ದಂಡವನ್ನು 40 ಅಡಿ ಉದ್ದ ಎರಡು ಅಡಿ ವ್ಯಾಸದ ಬೃಹತ್ ಸಿಡಿ ಕಂಬಕ್ಕೆ ಕಟ್ಟಲಾಯಿತು. ಗ್ರಾಮದ ಹಿರಿಯರಿಂದ ಸೂಚನೆ ದೊರೆಯುತ್ತಿದ್ದಂತೆ ಸಿಡಿ ಕಂಬವನ್ನು ಮೂರು ಬಾರಿ ಭಕ್ತರ ಉದ್ಘೋಷದ ನಡುವೆ ತಿರುಗಿಸಲಾಯಿತು. ಜಾನಪದ ಮೇಳಗಳಾದ ಡೊಳ್ಳು ಕುಣಿತ, ಹಲಗೆ ಮೇಳ, ಉರುಮೆ ಮತ್ತು ವಾಲಗಗಳ ಸದ್ದು ಉತ್ಸವಕ್ಕೆ ಕಳೆ ನೀಡಿತ್ತು.

ನಾಡಿನ ವಿವಿಧ ಭಾಗಗಳಿಂದ ಬಂದಿದ್ದ ಸಾವಿರಾರು ಭಕ್ತರು ಶನಿವಾರ ಮುಂಜಾನೆಯಿಂದಲೇ ಏಕನಾಥೇಶ್ವರಿ ದೇವಿಯಸನ್ನಿಧಿಗೆತೆರಳಿಪೂಜೆಸಲ್ಲಿಸಿದರು. ಇಂದು ಬಿಸಿಲಿನ ತಾಪ ಭಕ್ತರನ್ನು ಕಾಡುತ್ತಿದ್ದರೂ, ಜನರ ಭಕ್ತಿ ಮತ್ತು ಉತ್ಸಾಹ ಕಡಿಮೆಯಾಗಿರಲಿಲ್ಲ. ವಿವಿಧ ಗ್ರಾಮಗಳ ರೈತರು ಪ್ರತಿ ವರ್ಷ ತಮ್ಮ ಎತ್ತುಗಳನ್ನು ಶೃಂಗರಿಸಿ, ಕಮಾನುಗಾಡಿಯಲ್ಲಿ ಪಾನಕದ ಹಂಡೆಗಳನ್ನು ಇಟ್ಟುಕೊಂಡು ವಾದ್ಯಗಳೊಂದಿಗೆ ಬರುವ ದೃಶ್ಯ ವಿರಳವಾಗಿತ್ತು. ಬೆರಳೆಣಿಕೆಯ ಪಾನಕದ ಬಂಡಿಗಳು ಮಾತ್ರ ಕಂಡು ಬಂದಿತು. ನವ ದಂಪತಿ, ಮಹಿಳೆಯರು ಮತ್ತು ಪುರುಷರು ಉತ್ಸವದಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.

ಗ್ರಾಮ ದೇವತೆ ಏಕನಾಥೇಶ್ವರಿ ದೇವಿಯ ಸಿಡಿ ಉತ್ಸವಕ್ಕೆ ಸಾವಿರಾರು ಭಕ್ತರು ಸಾಕ್ಷಿಯಾಗಿದ್ದರು. ಶನಿವಾರ ಸಂಜೆ ಪಲ್ಲಕ್ಕಿಯಲ್ಲಿ ದೇವಿಯ ಉತ್ಸವ ಮೂರ್ತಿಯೊಂದಿಗೆ ಸಿಡಿ ಏರುವ ಭಕ್ತರನ್ನು ಗ್ರಾಮದಲ್ಲಿ ಮೆರವಣಿಗೆ ಮಾಡಿ, ಸಿಡಿ ಕಂಬದ ಬಳಿ ಕರೆತರಲಾಯಿತು. ಕಂಬಕ್ಕೆ ದೊಡ್ಡೆಡೆ ಸೇವೆಯನ್ನು ಸಲ್ಲಿಸಿ, ಸಿಡಿ ಆಚರಿಸಲಾಯಿತು. ಸಿಡಿ ಕಂಬವನ್ನು ಏರಿದರೆ ಕುಟುಂಬಕ್ಕೆ ಒಳಿತಾಗುವುದು ಎಂಬ ನಂಬಿಕೆ ಭಕ್ತರಲ್ಲಿದೆ. ದೇವಿಗೆ ಉರುಳು ಹಾಗೂ ದಿಂಡು ಸೇವೆಯನ್ನು ಈ ಸಂದರ್ಭದಲ್ಲಿ ಸಲ್ಲಿಸಲಾಯಿತು.

ಸಂಜೆ ಗೋಧೋಳಿ ಸಮಯ ಪ್ರಾರಂಭವಾಗುತ್ತಿದ್ದಂತಯೇ 80 ಅಡಿ ಉದ್ದದ ಸಿಡಿ ಕಂಬದ ವೈಭವದ ಉತ್ಸವಕ್ಕೆ ಭಕ್ತರು ದೇವಿಯ ಜಯ ಘೋಷಣೆ ಕೂಗಿದರು. ಸಿಡಿ ಉತ್ಸವಕ್ಕೆ ಆಗಮಿಸಿದ್ದ ಭಕ್ತರು ಮಳೆ-ಬೆಳೆಗಾಗಿ ದೇವಿಯ ಮೊರೆ ಹೋದರು. ಉತ್ಸವ ಮೂರ್ತಿಯೊಂದಿಗೆ ಭಕ್ತರು ಹಲಗೆ ಮೇಳ ವಾದ್ಯ ಮೇಳ ಮತ್ತು ಕಲಾ-ಮೇಳಗಳೊಂದಿಗೆ ಹೆಜ್ಜೆ ಹಾಕಿದರು. ಸುಮಾರು 8 ರಿಂದ 10 ಜನ ಭಕ್ತರು ಸಿಡಿಯನ್ನು ಅಡಿದರು, ಇವರು ತಮ್ಮ ಇಷ್ಟಾರ್ಥವನ್ನು ಈಡೇರಿಸುವಂತೆ ದೇವಿಯಲ್ಲಿ ಹರಕೆಯನ್ನು ಹೊತ್ತಿದ್ದು,ಇದನ್ನು ಈಡೇರಿಸುವಂತೆ ಈ ಸಿಡಿಯನ್ನು ಅಡಲಾಗುತ್ತದೆ.

ಏಕನಾಥೇಶ್ವರಿಯ ಸಿಡಿ ಉತ್ಸವಕ್ಕೆ ಚಿತ್ರದುರ್ಗ ತಾಲ್ಲೂಕಿನ ಸುತ್ತಾ-ಮುತ್ತಲ್ಲಿನ ವಿವಿಧ ಗ್ರಾಮದ ಗ್ರಾಮಸ್ಥರು ಆಗಮಿಸುವುದರ ಮೂಲಕ ಸಿಡಿ ಉತ್ಸವಕ್ಕೆ ಮೆರಗು ನೀಡಿದರು. ಏ.13ರ ಭಾನುವಾರ ಸಾಯಂಕಾಲ 6-30ಕ್ಕೆ ಬೆಟ್ಟದ ಮೇಲೆ ಜೋಗತಿ ಮತ್ತು ಜೋಗಪ್ಪರಿಂದ ಓಕಳಿ ಉತ್ಸವ ಏ.15ರಂದು ಬೆಳಗ್ಗೆ 10-30ಕ್ಕೆ ಕಂಕಣ ವಿಸರ್ಜನೆ ಮತ್ತು ಗಂಗಾಪೂಜೆಯೊಂದಿಗೆ ಜಾತ್ರೆ ಮುಕ್ತಾಯವಾಗಲಿದೆ.

# ಜನ್ಮದಿನ ಆಚರಣೆ ರದ್ದು; ಒಳಮೀಸಲಾತಿ ಬಳಿಕ ಸಂಭ್ರಮಿಸೋಣಾ: ಮಾಜಿ ಸಚಿವ ಆಂಜನೇಯ

» **ಚಿತ್ರದುರ್ಗ**



ಒಳಮೀಸಲಾತಿ 30 ವರ್ಷದ ಹೋರಾಟದ ಫಲ. ಆದರೆ, ಬಹಳಷ್ಟು ಗೊಂದಲ, ಕಾರಣದ ಕೈಗಳ ಕಾರಣಕ್ಕೆ ವಿಳಂಬ ಆಗಿದೆ. ಈ ಮಧ್ಯೆ ಪರಿಶಿಷ್ಟ ಜಾತಿಗೆ ಸೀಮಿತಗೊಳಿಸಿ ಜಾತಿಗಣತಿ ಕಾರ್ಯ ಆರಂಭಗೊಂಡು, ಒಳಮೀಸಲಾತಿ ಜಾರಿಗೊಳ್ಳಲಿದೆ. ಅಲ್ಲಿಯವರೆಗೂ ನಾನು ಯಾವುದೇ ಹಬ್ಬ-ಹರಿದಿನ ಜೊತೆಗೆ ನನ್ನ ಜನ್ಮದಿನ ಕೂಡ ಆಚರಿಸುವುದಿಲ್ಲ ಎಂದು ಮಾಜಿ ಸಚಿವ ಎಚ್.ಆಂಜನೇಯ ಹೇಳಿದ್ದಾರೆ.

ಭಾನುವಾರ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಏ.15, 2025ಕ್ಕೆ ನನಗೆ 70 ವರ್ಷ ತುಂಬಲಿದ್ದು,ಈದಿನವನ್ನುಸ್ಮರಣೀಯಗೊಳಿಸಲು ಹಿತೈಷಿಗಳು, ಅಭಿಮಾನಿಗಳು, ಬೆಂಬಲಿಗರು ಬೆಂಗಳೂರಿನ ಅರಮನೆ ಮೈದಾನ ಆವರಣದಲ್ಲಿನ ವಿಹಾರದಲ್ಲಿ ಕಾರ್ಯಕ್ರಮ ಸಿದ್ಧತೆ ಮಾಡಿಕೊಂಡು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಹ್ವಾನಿಸಿದ್ದರು. ಈಗ ಅವರೆಲ್ಲರನ್ನೂ ಮನವೊಲಿಸಿ, ಜನ್ಮದಿನಾಚರಣೆ ಕಾರ್ಯಕ್ರಮವನ್ನು ರದ್ದುಗೊಳಿಸಿರುತ್ತೇನೆ ಎಂದು ತಿಳಿಸಿದ್ದಾರೆ.ಪರಿಶಿಷ್ಟ ಸಮುದಾಯದಲ್ಲಿನ ನೊಂದ ಜನರಿಗೆ ಒಳಮೀಸಲಾತಿ ಜಾರಿ ಮೂಲಕ ಸಾಮಾಜಿಕ ನ್ಯಾಯ ಕಲ್ಪಿಸಬೇಕೆಂಬುದು ನನ್ನ ಹಾಗೂ ಸಿದ್ದರಾಮಯ್ಯ ಅವರ ಗುರಿ ಆಗಿದೆ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿಗಳು ನಮ್ಮ ಧ್ವನಿಗೆ ಬೆಂಬಲವಾಗಿ ನಿಂತಿದ್ದು, ನಮ್ಮ ಎಲ್ಲ ಬೇಡಿಕೆಗಳಿಗೆ ಸ್ಪಂದಿಸುತ್ತಿದ್ದಾರೆ. ಆದರೂ ಕಾಣದ ಕೈಗಳು ಒಳಮೀಸಲಾತಿಗೆ ಬಹಳಷ್ಟು ಅಡ್ಡಿಪಡಿಸಿದ್ದು, ಇದರ ವಿರುದ್ಧ ಧ್ವನಿ ಕೂಡ ಎತ್ತಿರುವೆ. ಜೊತೆಗೆ ಮುಖ್ಯಮಂತ್ರಿಗಳ ಮೇಲೆ ನಿರಂತರ ಒತ್ತಡ ತರುವ ಕೆಲಸ ಮಾಡಲಾಗುತ್ತಿದೆ.

ಒಳಮೀಸಲಾತಿ ಜಾರಿ ಅಧಿಕಾರ ರಾಜ್ಯ ಸರ್ಕಾರಗಳಿಗೆ ಇದೆಯೆಂದು ಸುಪ್ರೀಂ ಕೋರ್ಟ್ ಆಗಸ್ಟ್ 1, 2024ರಂದು ತೀರ್ಪು ನೀಡುತ್ತಿದ್ದಂತೆ, ಕೆಲ ಕಾಣದ ಕೈಗಳು 10 ಸಾವಿರ ಹುದ್ದೆಗಳನ್ನು ತುಂಬಿಕೊಳ್ಳಲು ತರಾತರಿಯಲ್ಲಿ ಅರ್ಜಿ ಆಹ್ವಾನಿಸಿದ್ದವು. ಬಳಿಕ ರಾಜ್ಯ ಸರ್ಕಾರ ಅಕ್ಟೋಬರ್ 28ರಂದು ರಾಜ್ಯದಲ್ಲಿ ಯಾವುದೇ ಹುದ್ದೆಗಳನ್ನು ನೇಮಕಾತಿ ಪ್ರಕ್ರಿಯೆ ಕೈಗೊಳ್ಳದಂತೆ ಆದೇಶ ನೀಡಿದೆ. ನಾವುಗಳು ಕೂಡ ಬಹಳಷ್ಟು ಗೊಂದಲ ಮೂಡಿಸಲು ಯತ್ನಿಸದೆ, ಹತಕ್ಕೆ ಬೀಳದೆ ಎಲ್ಲ ನೋವನ್ನು ನುಂಗಿಕೊಂಡು ಒಳಮೀಸಲಾತಿ ಜಾರಿಯತ್ತ ಆಸೆಗಣ್ಣಿನಿಂದ ನೋಡುತ್ತಿದ್ದೇವೆ. ಜೊತೆಗೆ ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿ, ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗಕ್ಕೆ ಪತ್ರ ಬರೆದು, ನಿಯೋಗ ತೆರಳಿ ಸರ್ವೆ ಸಂದರ್ಭ ಅಳವಡಿಸಿಕೊಳ್ಳಬೇಕಾದ ಅಂಶಗಳನ್ನು ಅವರುಗಳ ಗಮನಕ್ಕೆ ತರಲಾಗಿದೆ. ಎಲ್ಲಿಯೂ ಯಾವ ಸಮುದಾಯಗಳಿಗೂ ಅನ್ಯಾಯ ಆಗದ ರೀತಿ ಜಾತಿಗಣತಿ ಸರ್ವೆ ಪಾದರದರ್ಶಕವಾಗಬೇಕು,ಶೀಘ್ರಒಳಮೀಸಲಾತಿ ಜಾರಿಗೊಳ್ಳಬೇಕೆಂಬುದು ನಮ್ಮ ಬೇಡಿಕೆ ಆಗಿದೆ. ಆದ್ದರಿಂದ ಜನ್ಮದಿನಾಚರಣೆ ಸಂಭ್ರಮಕ್ಕಿಂತಲೂ ನಾನು ಸೇರಿ ಎಲ್ಲರಿಗೂ ಒಳಮೀಸಲಾತಿ ಜಾರಿ ಮುಖ್ಯ ವಿಷಯವಾಗಬೇಕು. ಏ.15ರಂದು ನನಗೆ ಶುಭಾಷಯ ಕೋರಲು ನನ್ನನ್ನು ಹುಡುಕಿಕೊಂಡು ಬರುವ ಅಗತ್ಯ ಇಲ್ಲ. ತಾವುಗಳು ಇರುವ ಸ್ಥಳ, ಕಾಲೋನಿ, ಹಟ್ಟಿಗಳಲ್ಲಿ ಜಾತಿಗಣತಿ ಕಾರ್ಯದ ಸಂದರ್ಭ ಯಾವುದೇ ಕಾರಣಕ್ಕೂ ಆದಿಕರ್ನಾಟಕ, ಆದಿದ್ರಾವಿಡ ಎಂದು ಬರೆಸಬಾರದು. ಮೂಲ ಜಾತಿಯನ್ನು ಕಡ್ಡಾಯವಾಗಿ ಬರೆಸುವಂತೆ ಸಮುದಾಯದವರಲ್ಲಿ ಜಾಗೃತಿ ಮೂಡಿಸಬೇಕು ಎಂದು ಕೋರಿದ್ದಾರೆ.ಒಳಮೀಸಲಾತಿ ಪರಿಶಿಷ್ಟ ಗುಂಪಿನಲ್ಲಿರುವ 101 ಜಾತಿಗೂ ನ್ಯಾಯ ಕಲ್ಪಿಸುವ ಏಕೈಕ ಮಾರ್ಗವಾಗಿದೆ. ಜೊತೆಗೆ ಸಾಮಾಜಿಕ ನ್ಯಾಯದ ಹರಿಕಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಪರಿಶಿಷ್ಟ ಜಾತಿಯಲ್ಲಿನ ಎಲ್ಲರಿಗೂ ನ್ಯಾಯ ಕೊಡಿಸಲು ದಿಟ್ಟ ಹೆಜ್ಜೆಯನ್ನಿಟ್ಟಿದ್ದಾರೆ. ನಾವುಗಳು ಅವರ ಕಾರ್ಯಕ್ಕೆ ಬೆಂಬಲವಾಗಿ ನಿಲ್ಲಬೇಕು. ಮುಖ್ಯವಾಗಿ ಜಾತ್ರೆ, ಹಬ್ಬ-ಹರಿದಿನ ಆಚರಣೆ ಮರೆತು ಜಾತಿಗಣತಿ ಕಾರ್ಯ ಯಶಸ್ವಿಗೆ ಅದರಲ್ಲೂ ಸರ್ವೆ ಸಂದರ್ಭ ಮೂಲ ಜಾತಿ ದಾಖಲು ಆಗುವ ರೀತಿ ಜನರಲ್ಲಿ ಜಾಗೃತಿ ವಹಿಸಬೇಕು. ಈ ನಿಟ್ಟಿನಲ್ಲಿ ನನ್ನ ಜನ್ಮದಿನ ಏ.15ರಂದು ಈ ಕಾರ್ಯಕ್ಕೆ ಚಾಲನೆ ನೀಡುವ ಮೂಲಕ ನೊಂದ ಜನರಿಗೆ ಹಕ್ಕು ಕೊಡಿಸಲು ಶ್ರಮಿಸಬೇಕೆಂದು ಕೋರುತ್ತೇನೆ ಎಂದು ತಿಳಿಸಿದ್ದಾರೆ.

## ತಾಲ್ಲೂಕಿನಾದ್ಯಂತ ಹದ ಮಳೆ: ಮೆಕ್ಕೆಜೋಳ, ಪಪ್ಪಾಯಿಬೆಳೆಗೆ ಹಾನಿ



» **ಚಳ್ಳಕೆರೆ**

ತಾಲ್ಲೂಕಿನಾದ್ಯಂತ ಶುಕ್ರವಾರ ತಡರಾತ್ರಿ ಮಳೆಯಾಗಿದ್ದು ಮಳೆ ಹಿನ್ನೆಲೆಯಲ್ಲಿ ಅಲ್ಪಪ್ರಮಾಣದ ನಷ್ಟವೂ ಸಹ ಸಂಭವಿಸಿದೆ. ತಾಲ್ಲೂಕಿನ ಗಿರಿಯಮ್ಮನಹಳ್ಳಿ ಗ್ರಾಮದ ನಿಂಗಯ್ಯ ಎಂಬುವವರ ವಾಸದ ಮನೆಯ ಮೇಲೆ ಮರಬಿದ್ದು ಹಂಚು, ಶೀಟು ಒಡೆದು ಸುಮಾರು 50 ಸಾವಿರಕ್ಕೂ ಹೆಚ್ಚು ನಷ್ಟಸಂಭವಿಸಿದೆ. ಬುಡ್ನಹಟ್ಟಿ ಗ್ರಾಮದ ತಿಪ್ಪೇಸ್ವಾಮಿರವರ ಸರ್ವೆ ನಂ, 36/5ರಲ್ಲಿ 1.30 ಎಕರೆ ಜಮೀನಿನಲ್ಲಿ ಮೆಕ್ಕೆಜೋಳವಿದ್ದು ಮಳೆ, ಗಾಳಿಗೆ ಮೆಕ್ಕೆಜೋಳ ಸಂಪೂರ್ಣವಾಗಿ ನೆಲಕಚ್ಚಿದೆ. ಸುಮಾರು 50 ಸಾವಿರಕ್ಕೂ ಹೆಚ್ಚು ನಷ್ಟ ಸಂಭವಿಸಿದೆ. ತಾಲ್ಲೂಕಿನ ನನ್ನಿವಾಳ ಗ್ರಾಮದ ಎ.ಎಸ್.ಅಜ್ಜಣ್ಣನವರ 163/1ಎನಲ್ಲಿದ್ದ ಸುಮಾರು ಎರಡು ಎಕರೆ ಪ್ರದೇಶದ 20 ಗುಂಟೆ ವ್ಯಾಪ್ತಿಯಲ್ಲಿ ಪಪ್ಪಾಯಿ ಬೆಳೆ ಗಾಳಿಯಿಂದ ನೆಲಕಚ್ಚಿದ್ದು ಸುಮಾರು 20ಸಾವಿರಕ್ಕೂ ಹೆಚ್ಚು ನಷ್ಟ ಸಂಭವಿಸಿದೆ. ತಾಲ್ಲೂಕಿನಾದ್ಯಂತ ಮಳೆ ಪ್ರಮಾಣ ಇಂತಿದೆ ಚಳ್ಳಕೆರೆ-12.06, ಪರಶುರಾಮಪುರ-14.06, ತಳಕು-11.02, ದೇವರಮರಿಕುಂಟೆ-4.06 ಒಟ್ಟು 42 ಎಂ.ಎಂ. ಮಳೆಯಾಗಿದೆ. ತಳಕು ಪ್ರದೇಶದಲ್ಲಿ ಮಳೆಯಾಗಿಲ್ಲ.

## ದತ್ತಮಂದಿರದಲ್ಲಿ ಶ್ರೀನಿವಾಸ್‌ದತ್ತ ಯೋಗೀಶ್ವರರವರ ಜಯಂತ್ಯೋತ್ಸವ ಆಚರಣೆ



**ಚಳ್ಳಕೆರೆ:** ತ್ಯಾಗರಾಜ ನಗರದ ದತ್ತಾತ್ರೇಯ ದೇವಸ್ಥಾನದಲ್ಲಿ ಶ್ರೀನಿವಾಸ್‌ದತ್ತಯೋಗೀಶ್ವರವರ 145ನೇ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಭಕ್ತಾಧಿಗಳು ಸಂಭ್ರಮ, ಸಡಗರಗಳಿಂದ ಆಚರಿಸಿದರು. ಶ್ರೀನಿವಾಸ್‌ದತ್ತಯೋಗೀಶ್ವರವರು ಧಾರ್ಮಿಕ ಕಾರ್ಯಕ್ರಮಗಳ ಬಗ್ಗೆ ಡಾ.ಅನಂತರಾಮ್‌ಗೌತಮ್ ಮಾತನಾಡಿ, ಕಳೆದ ಸುಮಾರು 45 ವರ್ಷಗಳ ಹಿಂದೆ ಇಲ್ಲಿ ದತ್ತಮಂದಿರ ನಿರ್ಮಾಣ ಮಾಡಲು ಸಂಕಲ್ಪ ಮಾಡಿದವರೇ ಶ್ರೀನಿವಾಸದತ್ತಯೋಗೀಶ್ವರವರು. ಅವರ ಅಭಿಲಾಷೆಯಂತೆ ಅವರ ಹಿರಿಯ ಪುತ್ರರಾದ ದಿವಂಗತ ಡಾ.ಜಿ.ಎಸ್.ಗೋವಿಂದದಾಸ್ ಮತ್ತು ಸಹೋದರರು, ಭಕ್ತಾಧಿಗಳು ದತ್ತಮಂದಿರ ನಿರ್ಮಾಣಕ್ಕೆ ಶ್ರಮಿಸಿದವರು. ಇಂತಹ ದೇವರ ಸನ್ನಿಧಿಯಲ್ಲಿ ಶ್ರೀನಿವಾಸ್‌ದತ್ತಯೋಗೀಶ್ವರವರ ನೆನಪಿಸಿಕೊಳ್ಳುವ ಕಾರ್ಯ ನಡೆಯುತ್ತಿರುವುದು ಸಂತಸ ತಂದಿದೆ ಎಂದರು.

ಶ್ರೀನಿವಾಸ್‌ದತ್ತರ ಜಯಂತಿ ಹಿನ್ನೆಲೆಯಲ್ಲಿ ಪತಂಜಲಿ ಯೋಗಶಿಕ್ಷಣ ಸಮಿತಿ ಭಜನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಸಮಿತಿ ಅಧ್ಯಕ್ಷ ಮಹೇಶ್, ಶ್ರೀನಾಥಶರ್ಮ, ಡಾ.ಬಾಲಾಜಿವೆಂಕಟೇಶ್, ಸಿ.ಎಸ್.ಗೋಪಿನಾಥ, ಖಜಾಂಚಿ ನರಸಿಂಹಮೂರ್ತಿ ಮುಂತಾದವರು ಭಾಗವಹಿಸಿದ್ದರು.

**ಪ್ರಮುಖ ಸುದ್ದಿ**

# ಉತ್ತಮ ಬದುಕನ್ನು ರೂಪಿಸಿಕೊಳ್ಳಲು ದೇವರ ಕೃಪೆ ಅಗತ್ಯ


» **ಚಳ್ಳಕೆರೆ**



ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಮ್ಮಪೂರ್ವಿಕರು ಸಮಾಜವನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ಆಚರಣೆ ಮಾಡುತ್ತಾ ಬಂದಿದ್ದಾರೆ. ಎಲ್ಲರೂ ಒಂದೆಡೆ ಸೇರಿ ಹಬ್ಬ ಆಚರಣೆಗಳಿ ಸಂಬಂಧಗಳುಗಟ್ಟಿಗೊಂಡು ಸದೃಢ ಸಮಾಜ ನಿರ್ಮಾಣಕ್ಕೆ ನಾಂದಿಯಾಗಲಿವೆ ಎಂದು ಶಾಸಕ, ಸಣ್ಣಕೈಗಾರಿಕೆ ಅಭಿವೃದ್ಧಿಮಂಡಳಿ ಅಧ್ಯಕ್ಷ ಟಿ.ರಘುಮೂರ್ತಿ ಹೇಳಿದರು. ಅವರು, ತಾಲ್ಲೂಕಿನ ಜಾಜೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಾಗಗೊಂಡನಹಳ್ಳಿ ಗ್ರಾಮದಲ್ಲಿ ನಡೆದ ಶ್ರೀಆಂಜನೇಯಸ್ವಾಮಿಯ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ಸ್ವಾಮಿಪೂಜೆ ನೆರವೇರಿಸಿ ಭಕ್ತರನ್ನು ಉದ್ದೇಶಿಸಿ ಮಾತನಾಡಿದರು. ಆಂಜನೇಯ ಸ್ವಾಮಿಯ ಕೃಪಾಕಟಾಕ್ಷದಿಂದ ಈ ಭಾಗದಲ್ಲಿ ನೀರಿನ ಕೊರತೆ ನಿವಾರಣೆಯಾಗಿದೆ. ಈ ಬಾರಿ ಉತ್ತಮ ಮಳೆ, ಬೆಳೆಯಾಗುವ ಲಕ್ಷಣವಿದೆ, ನಾವೆಲ್ಲರೂ ಉತ್ತಮ ಬದುಕಿಗಾಗಿ ದೇವರನ್ನು ನಿತ್ಯ ಧ್ಯಾನಿಸೋಣವೆಂದರು.

ರಾಮಜೋಗಿಹಳ್ಳಿ :- ತಾಲ್ಲೂಕಿನ ರಾಮಜೋಗಿಹಳ್ಳಿಯಲ್ಲಿ ನಡೆದ ಆಂಜನೇಯಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಮತ್ತು ತಾಲ್ಲೂಕಿನ ಹೆಗ್ಗೆರೆ ಗ್ರಾಮದ ಕೆಂಚಪ್ಪಸ್ವಾಮಿ ಜಾತ್ರೆ ಹಾಗೂ ಉಚಿತ ವಿವಾಹಕಾರ್ಯಕ್ರಮದಲ್ಲಿ ಶಾಸಕ ಟಿ.ರಘುಮೂರ್ತಿ ಪಾಲ್ಗೊಂಡು ದೇವರ ದರ್ಶನ ಪಡೆದರು. ಈ ಭಾಗದ ಶಾಸಕನಾಗಿ ಜನರ ಸೇವೆ ಮಾಡಲು ನನಗೆ ಆಂಜನೇಯಸ್ವಾಮಿಯೇ ವರನೀಡಿದ್ದಾನೆ, ನಾವೆಲ್ಲರೂ ಭಗವಂತನ ಆರಾಧನೆ ಮೂಲಕ ಉತ್ತಮ ಬದುಕನ್ನು ಕಂಡುಕೊಳ್ಳೋಣವೆಂದರು.

ಜಾಜೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ರಂಜನ್, ಸುರೇಶ್‌ಬಾಬು, ನಾಗರಾಜು, ದೇವರಾಜರೆಡ್ಡಿ, ಪ್ರಶಾಂತ್, ಗಂಗಾಧರ, ಮೋಹನ್, ತಿಪ್ಪೇಸ್ವಾಮಿ, ನಾಗರಾಜು, ಮಂಜುನಾಥ, ಚಲ್ಮೇಶ್, ವೀರಣ್ಣ, ರಂಗನಾಥ, ಲಕ್ಷ್ಮಣ, ತಿಪ್ಪೇಸ್ವಾಮಿ, ಮಹಾಲಿಂಗಪ್ಪ, ಪ್ರವೀಣ್, ಬ್ಲಾಕ್‌ಕಾಂಗ್ರೆಸ್ ಅಧ್ಯಕ್ಷ ಕೆ.ವೀರಭದ್ರಯ್ಯ, ನಗರಸಭಾ ಸದಸ್ಯ ಬಿ.ಟಿ.ರಮೇಶ್‌ಗೌಡ ಮುಂತಾದವರು ಉಪಸ್ಥಿತರಿದ್ದರು.



ಏಪ್ರಿಲ್ 14
ಭಾರತದ ಸಂವಿಧಾನ ಶಿಲ್ಪಿ
ಡಾ.ಬಿ.ಆರ್.ಅಂಬೇಡ್ಕರ್
ಅವರ ಹುಟ್ಟಿದ ದಿನ.
ಆ ತ್ಯಾಗಮೂರ್ತಿಯ ಜೀವನ
ಪಥವನ್ನ ಪ್ರಭುಚನ್ನಬಸವ
ಸ್ವಾಮೀಜಿ ಅವರ ಮಹಾತ್ಮರ
ಚರಿತಾಮೃತ ಕೃತಿಯಿಂದ
ಸಂಪಾದಿಸಿ ಕೊಟ್ಟಿದ್ದಾರೆ
ರುದ್ರಮೂರ್ತಿ ಎಂ.ಜೆ

# ಆಧುನಿಕ ಭಾರತದ ಸಮಾನತೆಯ ಸೂರ್ಯ



# ಡಾ.ಬಿ.ಆರ್.ಅಂಬೇಡ್ಕರ್

**ಸಮಾನತೆಯ ಸೂರ್ಯ:** ಆಧುನಿಕ ಭಾರತ ಕಂಡಂತ ಉದಯ! ಜ್ವಲಂತ ಧ್ರುವತಾರೆ! ಸಮಾನತೆಯ ಸೂರ್ಯ ಡಾ. ಬಿ .ಆರ್ .ಅಂಬೇಡ್ಕರ್ ಅವರು. ಎಲ್ಲರ ಹಣೆ ಬರಹವನ್ನು ಬ್ರಹ್ಮ ಬರೆದು ಕಳಿಸುತ್ತಾನೆ ಎಂದು ನಂಬಿದ್ದ ಮೌಢ್ಯ ಸಮಾಜ ಇದು. ಇಂತಹ ಶ್ರೇಣೀಕೃತ ,ಅಜ್ಞಾನ ಜನರೆದುರು ಎದೆತಟ್ಟಿ –ಮನಮುಟ್ಟಿ ಹೀಗೆ ಹೇಳುತ್ತಾರೆ .ಈ ಬಲ ಭೀಮ ನನ್ನ ಹಣೆಬರಹವನ್ನು ಬ್ರಹ್ಮನಿಗೆ ಬರೆಯಲು ಬಿಡಲಾರೆ. ನನ್ನ ಹಣೆ ಬರಹವನ್ನು ನಾನೇ ಬರೆದುಕೊಳ್ಳುತ್ತೇನೆ ಎಂದು.! ಆಹಾ ಇದು ಎಂತಹ ಆತ್ಮಾಭಿಮಾನದ ಭೇರಿನಾದ .ಶತಮಾನಗಳ ಅಜ್ಞಾನ, ಅಂಧಶ್ರದ್ಧೆ, ಅಪನಂಬಿಕೆಗಳಿಗೆ ತಿಲಾಂಜಲಿ , ಸ್ವಾಭಿಮಾನ, ಶಿಕ್ಷಣ, ಸಾಮರಸ್ಯ ಸಹಭಾಳ್ವೆಗೆ ಅಂತಹ ಐಕ್ಯತೆಯ ಗಾನ ಮೊಳಗಿಸಿದ ಮಹಾಮಾನವತಾವಾದಿ ಶ್ರೀ ಬಾಬಾ ಸಾಹೇಬರು.

**ಮನುಕುಲ ಸೂರ್ಯನ ಅವತಾರ:** ಭಾರತದ ಬಹುದೊಡ್ಡ ರಾಜ್ಯ ಮಹಾರಾಷ್ಟ್ರದ ಅಂಬಾವಾಡ ಜಿಲ್ಲೆಯ ಚಿಕ್ಕಹಳ್ಳಿ' ಮಹರ್ '!ಈ ಊರಿನ ಜನರು ಗಟ್ಟಿಗರು ಇಲ್ಲಿ ಅಸ್ಪೃಶ್ಯತೆ ತಾಂಡವವಾಡುತ್ತಿತ್ತು. ಸಕ್ಪಾಲ ಕುಟುಂಬದ ರಾಮ್ ಜೀರವರು ಭಾರತೀಯ ಸೇನೆಯಲ್ಲಿ ಸೈನಿಕರಾಗಿದ್ದರು.ಇವರೊಂದಿಗೆ ಮುರಾಬಾದದ ಭೀಮಬಾಯಿ ಅವರೊಂದಿಗೆ ವಿವಾಹವಾಯಿತು. ದಂಪತಿಗಳು ಅನ್ಯೋನ್ಯವಾಗಿದ್ದರು. ಕಬೀರ ಪಂಥದ ಅನುಯಾಯಿಗಳಿವರು.

ರಾಮ್ ಜೀಯವರು ಮಧ್ಯಪ್ರದೇಶದ "ಮೋವ್" ನಲ್ಲಿ ನೌಕರಿಯಲ್ಲಿದ್ದರು. ಅಲ್ಲಿಯೇ ತಾಯಿ ಭೀಮಾ ಬಾಯಿ 1891 ಏಪ್ರಿಲ್ 14ರಂದು ಒಂದು ಗಂಡು ಮಗುವಿಗೆ ಜನ್ಮ ನೀಡಿದಳು. ಅದು ಅವರ 14ನೆಯ ಮಗು. ಆ ಮಗುವೇ ಮುಂದೆ ಭಾರತ ಭಾಗ್ಯವಂತನಾದ. ಸಂವಿಧಾನ ಶಿಲ್ಪಿಯಾದ. ಅವರೇ "ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್" ಅವರು.

**ಅರಿವೇ ಗುರು ಪರಿಶ್ರಮವೇ ಪೂಜೆ :** ಭೀಮನಿಗೆ ಎರಡು ವರ್ಷವಾಗಿದ್ದಾಗ ತಂದೆ ರಾಮ್ ಜಿ ಸೈನಿಕ ಶಾಲೆಯ ಮುಖ್ಯೋಪಾಧ್ಯಾಯನಾಗಿ ನಿವೃತ್ತಿ ಹೊಂದಿದ್ದರು. ಅವರಿಗೆ ಮರಾಠಿ, ಇಂಗ್ಲಿಷ್ ಚೆನ್ನಾಗಿ ಬರುತ್ತಿತ್ತು. ಗಣಿತವೆಂದರೆ ಅವರಿಗೆ ಬಲು ಪ್ರೀತಿ. ಆದ್ದರಿಂದ ಅವರು ಮಕ್ಕಳಿಗೆ ಕಾಳಜಿಯಿಂದ ಕಲಿಸಿದರು. ರಾಮ್ ಜಿ ಕುಡಿತದ ಚಟದಿಂದ ದೂರವಿದ್ದರು. ಮಾಂಸವನ್ನು ಮುಟ್ಟುತ್ತಿರಲಿಲ್ಲ. ಶುದ್ಧ ಸಸ್ಯಹಾರಿಗಳಾಗಿದ್ದರು. ತಂದೆ ಸಚ್ಚಾರಿತ್ರ್ಯ ಭೀಮನ ಮೇಲೆ ತುಂಬಾ ಪ್ರಭಾವ ಬೀರಿತು. ನಿವೃತ್ತಿಯ ನಂತರ ರಾಮ್ ಜಿ ಕೊಂಕಣದ ದಾಪೋಲಿಗೆ ಬಂದು ನೆಲೆಸಿದರು. ಭೀಮನ ಪ್ರಾಥಮಿಕ ಶಿಕ್ಷಣ ಇಲ್ಲಿಂದಲೇ ಆರಂಭವಾಯಿತು.

ಭೀಮ ಆರು ವರ್ಷವನಿದ್ದಾಗ ತಾಯಿ ತೀರಿಕೊಂಡರು. ಇವರ 14 ಮಕ್ಕಳಲ್ಲಿ ಐವರು ಮಾತ್ರ ಬದುಕಿ ಉಳಿದಿದ್ದರು. ಎಲ್ಲರಿಗಿಂತ ಕಿರಿಯವನೇ ಭೀಮ. ಈ ಮಕ್ಕಳ ಪಾಲನೆ,ಪೋಷಣೆಯ ಹೊಣೆ ರಾಮ್ ಜಿಯ ತಂಗಿ ಮೀರಾಬಾಯಿಯ ಮೇಲೆ ಬಿದ್ದಿತು. ಗೂನು ಬೆನ್ನಿನ ಈ ಸಾತ್ವಿಕ ಹೆಣ್ಣುಮಗಳು ಮದುವೆ ಆಗದೆ ಇದ್ದಳು. ಈ ಸೋದರತ್ತೆಯ ಅಂತಃಕರಣದ ಬೆಳಕಿನಲ್ಲಿ ಭೀಮ ಬೆಳೆಯಲಾರೆಮಿಸಿದನು.

ಹೈಸ್ಕೂಲ್ ಶಿಕ್ಷಣಕ್ಕಾಗಿ ಭೀಮ ಅಣ್ಣನೊಂದಿಗೆ ಸತಾರೆಗೆ ಬಂದರು. ಅಲ್ಲಿ ಅವರಿಗೆ ತಾವು ಅಸ್ಪೃಶ್ಯರು ತಮ್ಮನ್ನು ತುಚ್ಚವಾಗಿ ಕಾಣಲಾಗುತ್ತಿದೆಂಬುದರ ಅನುಭವ ಆಗತೊಡಗಿತು. ರಾಮ್ ಜಿ ಗೊರೇಗಾಂವ್ ದಲ್ಲಿ ಕೆಲಸಕ್ಕಿದ್ದರು. ದೊಡ್ಡ ಕುಟುಂಬದ ನಿರ್ವಹಣೆಗೆ ನಿವೃತ್ತಿಯ ನಂತರ ಅವರಿಗೆ ಕೆಲಸ ಮಾಡಬೇಕಾಗಿ ಬಂದಿತು. ತಂದೆಯ ಬೇಟಿಗೆಂದು ಸೋದರರು ಹೊರಟರು. ಮಳೂರು ನಿಲ್ದಾಣದಲ್ಲಿ ಇಳಿದರು. ಅಲ್ಲಿಂದ ಅವರಿಗೆ ಚಕ್ಕಡಿಯಲ್ಲಿ ಪ್ರಯಾಣಿಸಬೇಕಾಯಿತು .ಈ ಬಾಲಕರು ಅಸ್ಪೃಶ್ಯರು ಎಂಬುದು ಚಕ್ಕಡಿಯವನಿಗೆ ಗೊತ್ತಾಯಿತು. ಆತ ಸವರ್ಣೀಯನಾಗಿದ್ದ. ಸಿಟ್ಟು ಬೆಂಕಿಯಂತಾದ. ಆತ ಚಕ್ಕಡಿಯ ನೊಗವನ್ನು ಎತ್ತಿ ಬಾಲಕರನ್ನು ಕೆಳಗೆ ಕೆಡವಿದ.ತನಗೆ ಮತ್ತು ತನ್ನ ಎತ್ತುಗಳಿಗೆ ಮೈಲಿಗೆ ಆಯಿತೆಂದು ಕೂಗಾಡಿದ. ಎರಡರಷ್ಟು ಹಣವನ್ನು ಕೊಡುತ್ತೇವೆ ಎಂದು ಬಾಲಕರು ಅಂದಾಗ ಅವರನ್ನು ಮತ್ತೆ ಚಕ್ಕಡಿಯಲ್ಲಿ ಕೂಡಿಸಿದ. ತಾನು ಮಾತ್ರ ನಡೆದುಕೊಂಡೆ ಹೊರಟ. ದಾರಿಯಲ್ಲಿ ಇಬ್ಬರಿಗೂ ಬಾಯಾರಿಕೆ ಆಯಿತು. ಇವರು ಅಸ್ಪೃಶ್ಯರು ಎಂಬ ಕಾರಣಕ್ಕೆ ದಾರಿಯುದ್ಧಕ್ಕೂ ಇವರಿಗೆ ಯಾರು ಕುಡಿಯಲು ನೀರು ಕೊಡಲಿಲ್ಲ.

ಇನ್ನೊಂದು ಪ್ರಸಂಗದಲ್ಲಿ ಕ್ಷೌರಿಕನು ಭೀಮ ಅಸ್ಪೃಶ್ಯನೆಂಬ ಕಾರಣಕ್ಕೆ ತಲೆಬೋಳಿಸಲು ನಿರಾಕರಿಸಿದನು. ಅವನ ಸೋದರತ್ತೆ ಕೂದಲು ಕತ್ತರಿಸಿದಳು. ಶಾಲೆಯಲ್ಲೂ ಇಂಥದ್ದೇ ಅವಮಾನಕರವಾದ ಕೆಟ್ಟ ಅನುಭವಗಳು ಭೀಮನಿಗೆ ಎದುರಾದವು. ಇವರು ಸವರ್ಣಿಯರ ಜೊತೆ ಕೂಡುವಂತಿಲ್ಲ ಶಿಕ್ಷಕರು ಇವರಿಗೆ ಪ್ರಶ್ನೆಗಳು ಕೇಳುತ್ತಿರಲಿಲ್ಲ. ಇವರ ನೋಟ್ ಬುಕ್ ಮುಟ್ಟುತ್ತಿರಲಿಲ್ಲ .ಇವರಿಗೆ ನೀರಡಿಕೆಯಾದಾಗ ಸವರ್ಣೀಯರು ಮೇಲಿಂದ ನೀರು ಸುರಿಯುತ್ತಿದ್ದರು. ಆ ನೀರನ್ನು ಅಸ್ಪೃಶ್ಯರು ಬೊಗಸೆಯಲ್ಲಿ ಹಿಡಿದು ಕುಡಿಯಬೇಕಾಗುತ್ತಿತ್ತು. ಇಂಥ ಹಲವಾರು ಪ್ರಸಂಗಗಳು ಭೀಮನ ಎಳೆಯ ಹೃದಯದ ಮೇಲೆ ಬರೆ ಎಳೆದುಬಿಟ್ಟಿದ್ದವು.

ಭೀಮಾ 1908 ರಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಅಂದಿನ ದಿನಗಳಲ್ಲಿ ಅಸ್ಪೃಶ್ಯ ಹುಡುಗನೊಬ್ಬ ಮೆಟ್ರಿಕ್ ಪಾಸ್ ಮಾಡಿದ್ದು ಒಂದು ಮಹಾಸಾಧನೆಯೆಂದೆನಿಸಿತು. ಎಸ್. ಕೆ. ಬೋಳೆಯವರ ಅಧ್ಯಕ್ಷತೆಯಲ್ಲಿ ಅಂಬೇಡ್ಕರ್ ಅವರಿಗೆ ಅಭಿನಂದನೆ ಸಭೆ ನಡೆಯಿತು .ಅಲ್ಲಿ ಕೇಳುಸ್ಕರ್ ಎಂಬ ಮರಾಠಿ ಲೇಖಕ ತಾವು ಬರೆದ ಗೌತಮ ಬುದ್ಧನ ಚರಿತ್ರೆಯ ಪುಸ್ತಕವನ್ನು ಅಂಬೇಡ್ಕರ್ ಗೆ ಕಾಣಿಕೆಯಾಗಿ ಕೊಟ್ಟರು .ಎಲ್ಲರೂ ಭೀಮನ ಜಾಣ್ಮೆಯನ್ನು ಮೆಚ್ಚಿಕೊಂಡು ಮಾತನಾಡಿ ಹುರಿದುಂಬಿಸಿದರು. ಮುಂದೆ ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಭೀಮ್ ಜಿ ಅಂಬೇಡ್ಕರ್ ಎಲ್ ಫಿನ್ ಸ್ಟನ್ ಕಾಲೇಜು ಸೇರಿದರು. ಆಗ ಅವರಿಗೆ 17 ವರ್ಷ.

**ವಿವಾಹ:** ಮೆಟ್ರಿಕ್ ಆದೊಡನೆಯೇ ಮದುವೆ ಎನ್ನುವುದು ಅಂದಿನ ಕಾಲದ ರೂಢಿಯಾಗಿತ್ತು. ರಾಮ್ ಜಿ ಕೂಡ ಮಗನ ಮದುವೆಯನ್ನು ನಿಶ್ಚಯಿಸಿದರು.ಬಿಕು ವಾಲಂಗ್ ಕರ ಎಂಬ ಬಡ ಪೋರ್ಟರ್ನನ ಮಗಳು ರಾಮಿ ರಮಬಾಯಿಯೆಂದು ಅಂಬೇಡ್ಕರ್ ಧರ್ಮ ಪತ್ನಿಯಾಗಿ ಮನೆ ತುಂಬಿದಳು. ಈಗ ರಾಮ್ ಜಿ ತಮ್ಮ ಮನೆಯನ್ನು ಪರೇಲ್ ವಿಭಾಗದಲ್ಲಿನ ಎರಡು ಕೋಣೆಗೊಳ್ಳುಳ್ಳ ಮನೆಗೆ ಬದಲಾಯಿಸಿದರು. ಒಂದು ವಾಸಕ್ಕೆ ಇನ್ನೊಂದು ವ್ಯಾಸಂಗಕ್ಕೆ. ವಿವಾಹ ಭೀಮನ ವಿದ್ಯೆಗೆ ಎಂದು ಅಡಚಣೆ ಆಗಲಿಲ್ಲ. ತಮ್ಮನಾದ ಭೀಮನ ಓದಿಗೆ ನೆರವಾಗಲೆಂದು ಅಣ್ಣ ಆನಂದ್ ರಾವ್ ಶಾಲೆ ತೊರೆದು ದುಡಿಯಲು ತೊಡಗಿದನು. ಅನಾರೋಗ್ಯದ ಕಾರಣ ಒಂದು ವರ್ಷ ಅಂಬೇಡ್ಕರ್ ಕಾಲೇಜ್ ಬಿಡಬೇಕಾಯಿತು. ಮುಂದಿನ ವರ್ಷವೂ ಬಡತನದಿಂದಾಗಿ ಓದು ಅವಶ್ಯಕವಾಯಿತು. ಇಂಥ ಸಂದರ್ಭದಲ್ಲಿ ಬರೋಡಾದ ಮಹಾರಾಜರಾದ ಸಾಂಭಾಜಿ ರಾವ್ ಗಾಯಕವಾಡರು ತಿಂಗಳಿಗೆ ರೂ.25ರೂಗಳ ವಿದ್ಯಾರ್ಥಿ ವೇತನ ನೀಡಿದರು. ಈ ಸಹಾಯ ಸಿಗಲು ಕೆಳೂಸ್ಕರ್ ತುಂಬಾ ನೆರವಾಗಿದ್ದರು

**ಜಾತಿಯ ಭೂತ:** ಕಾಲೇಜಿನಲ್ಲಿಯೂ ಜಾತಿಯ ಭೂತ ಅವರ ಬೆನ್ನು ಬಿಡಲಿಲ್ಲ. ಕ್ಯಾಂಟೀನಿನ ಮಾಲೀಕ ಅಂಬೇಡ್ಕರ್ ಗೆ ಕುಡಿಯಲು ಒಂದು ಲೋಟ ನೀರು ಕೊಡುತ್ತಿರಲಿಲ್ಲ. ಆದರೆ ಮುಲ್ಲರ್ನೆಂಬ ಪ್ರಾಧ್ಯಾಪಕ ಭೀಮ್ ಜಿಗೆ ಓದಲು ಪುಸ್ತಕ ಮತ್ತು ತೊಡಲು ಬಟ್ಟೆ ಮತ್ತು ಮುನ್ನಡೆಯಲು ಪ್ರೋತ್ಸಾಹ ಕೊಟ್ಟನು. ತತ್ಫಲವಾಗಿ 1912 ರಲ್ಲಿ ಅಂಬೇಡ್ಕರ್ ಬಿ.ಎ .ಪಾಸ್ ಮಾಡಿದರು. ಪದವಿ ಪಡೆದ ಮೇಲೆ ಗಾಯಕವಾಡ ಮಹಾರಾಜರ ಸೈನ್ಯದಲ್ಲಿ ಲೆಫ್ಟಿನೆಂಟಾಗಿ ಕೆಲಸಕ್ಕೆ ಸೇರಿಕೊಂಡರು. ಇನ್ನು 15 ದಿನಗಳಾಗಿರಲಿಲ್ಲ. ಮುಂಬೈಯಿಂದ ಅವರ ತಂದೆಗೆ ತೀವ್ರ ಕಾಯಿಲೆ ಎಂಬ ತಂತಿ ಸಂದೇಶ ಬಂದಿತು. ಅಂಬೇಡ್ಕರ್ ಮುಂಬೈಗೆ ಧಾವಿಸಿದರು. ಮಗನ ಮುಖ ಕಾಣಲೆಂದೇ ಜೀವ ಹಿಡಿದುಕೊಂಡಿದ್ದ ರಾಮ್ ಜಿ ಕೊನೆಯುಸಿರೆಳದರು. ಅಂಬೇಡ್ಕರ್ ಗೆ ಆಧಾರ ಸ್ತಂಭವೇ ಕಳಚಿ ಬಿದ್ದಂತಾಯಿತು .

**ಬರೋಡ ಮಹಾರಾಜರ ನೆರವು:** ಅಧ್ಯಯನದ ಹಂಬಲ ಭೀಮರಾಯರಿಗೆ ಬಲವಾಗಿತ್ತು.ಆ ಹಂಬಲಕ್ಕೆ ಬೆಂಬಲ ನೀಡಿದವರು ಬರೋಡದ ಗಾಯಕವಾಡ ಮಹಾರಾಜರು .ವಿದ್ಯಾರ್ಥಿಗಳ ಕುರಿತು ಕಾಳಜಿ ಹೊಂದಿದ ಮಹಾರಾಜರು ಭೀಮರಿಗೆ ಬಲವನ್ನು ತುಂಬಿದರು. ಅರ್ಜಿ ಪಾಸಾಗಿ ವಿದ್ಯಾರ್ಥಿ ವೇತನ ನೀಡಲು ಒಪ್ಪಿಗೆ ಸೂಚಿಸಿದರು.ಈ ಕೆಳಗಿನ ಕರಾರುಗಳ ಮೇಲೆ ಆಯ್ಕೆ ಮಾಡಿದರು.

1) ಮಹಾರಾಜರು ಗೊತ್ತು ಪಡಿಸಿದ ವಿಷಯಗಳ ಮೇಲೆ ಅಧ್ಯಯನ ನಡೆಸಬೇಕು.2) ನಿರ್ದಿಷ್ಟ ಅವಧಿಯೊಳಗೆ ಅಧ್ಯಯನ ಮುಗಿಸಬೇಕು.3) ಉನ್ನತ ಶಿಕ್ಷಣ ಪಡೆದು ಮರಳಿದ ನಂತರ 10 ವರ್ಷಗಳ ಕಾಲ ಬರೋಡ ಮಹಾ ಸಂಸ್ಥಾನದಲ್ಲಿ ಸೇವೆ ಸಲ್ಲಿಸಬೇಕು.

ಈ ಒಪ್ಪಂದಕ್ಕೆ ಸಹಿ ಹಾಕಿ ಅಂಬೇಡ್ಕರ್ ಅಮೆರಿಕಾಕ್ಕೆ ಹೊರಟರು. 1913ರಲ್ಲಿ ಜುಲೈ ತಿಂಗಳಲ್ಲಿ ನ್ಯೂಯಾರ್ಕ್ ನಗರವನ್ನು ತಲುಪಿದರು. ಅಲ್ಲಿ ದಲಿತ, ಉತ್ತಮ, ಶ್ರೇಷ್ಠ ,ಕನಿಷ್ಠ ಎಂಬ ಭೇದಭಾವ ಇರಲಿಲ್ಲ. ಎಲ್ಲರೊಡನೆ ಪಾಠ ಮಾಡುವ, ಊಟ ಮಾಡುವ, ಆಟವಾಡುವ, ಚರ್ಚೆ ಮಾಡುವ ಮುಕ್ತ ವಾತಾವರಣವಿತ್ತು. ಅಲ್ಲಿ ದಿನದ 14 ಗಂಟೆ ಕಾಲ ಓದಿದರು. ಎರಡು ವರ್ಷಗಳ ನಿರಂತರ ಪರಿಶ್ರಮದಿಂದ 1915ರಲ್ಲಿ ಪುರಾತನ ಭಾರತದ ವಾಣಿಜ್ಯ ಎಂಬ ಮಹಾ ಪ್ರಬಂಧ ಬರೆದುಕೊಟ್ಟು, ಕೊಲಂಬಿಯ ವಿಶ್ವವಿದ್ಯಾನಿಲಯದಿಂದ ಎಂ.ಎ. ಪದವಿಯನ್ನು ಪಡೆದರು. ಭಾರತದ ರಾಷ್ಟ್ರೀಯ ಆದಾಯ ಒಂದು ಐತಿಹಾಸಿಕ ಹಾಗೂ ವಿವರಣಾತ್ಮಕ ಅಧ್ಯಯನ ಎಂಬ ಮೇರು ಪ್ರಬಂಧವನ್ನು ಬರೆದು ಒಪ್ಪಿಸಿದರು. ಇದಕ್ಕಾಗಿ ಅವರಿಗೆ ಕೊಲಂಬಿಯ ವಿಶ್ವವಿದ್ಯಾನಿಲಯ ಪಿಎಚ್ ಡಿ ಪದವಿ ನೀಡಿ ಗೌರವಿಸಿತು. ಅಮೆರಿಕದಲ್ಲಿ ಮಹೋನ್ನತ ಪದವಿ ಪುರಸ್ಕಾರಗಳ ಜೊತೆಗೆ ನವಲ್ ಭತೇನ್ ಎಂಬ ಶ್ರೀಮಂತ ವಿದ್ಯಾರ್ಥಿಯ ಗೆಳೆತನ ಮತ್ತು ಅಪಾರ ಪ್ರಸಂಶೆ, ಪ್ರಸಿದ್ಧಿ ಅಂಬೇಡ್ಕರ್ ಗೆ ಲಭ್ಯವಾದವು.

**ಲಂಡನ್ನಿನಲ್ಲಿ:** ಉನ್ನತ ಅಧ್ಯಯನ ಮಾಡಬೇಕೆಂಬುದು ಭೀಮರಾವ್ ರ ನಿತ್ಯ ಆಸೆ. ಹೀಗಾಗಿ ಅಮೆರಿಕಯಿಂದ ನೇರ ಲಂಡನ್ನಿಗೆ ಬಂದರು. ಲಂಡನ್ನಿನ ಆಕ್ಸ್ಫರ್ಡ್ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆಯಬೇಕೆಂಬುದು ಅವರ ಮಹತ್ವಾಕಾಂಕ್ಷೆ. 1916 ಜೂನ್ ಹಗಲು– ರಾತ್ರಿ ಓದಿದರು. ಕೆಲವು ದಿನಗಳ ನಂತರ ಬರೋಡದ ಮಹಾರಾಜರಿಂದ ಪತ್ರ ಬಂದಿತು. ಮರಳಿ 1917 ಆಗಸ್ಟ್ 21ರಂದು ಕೈಸರ ಹಡಗಿನ ಮೂಲಕ ಮುಂಬೈಗೆ ಬಂದರು.ಮಹಾರಾಜರ ಒಡಂಬಡಿಕೆಯಂತೆ ಮರಳಿ ಬಂದು ಬರೋಡಾ ಸರಕಾರದಲ್ಲಿ 10 ವರ್ಷಗಳ ಕಾಲ ಸೇವೆ ಮಾಡಿದರು .ಇವರು ಅಸ್ಪೃಶ್ಯರು ಎನ್ನುವ ಕಾರಣಕ್ಕೆ ಇವರಿಗೆ ಸರಿಯಾದ ಸಹಕಾರ ದೊರೆಯಲಿಲ್ಲ. ಕೆಲವು ದಿನಗಳ ನಂತರ ಅಲ್ಲಿಯೂ ಕೆಲಸ ನಿಂತು ಹೋಯಿತು.

**ಜ್ಞಾನದಾಹಿ :** ಕೊಲ್ಲಾಪುರದ ಶಾಹು ಮಹಾರಾಜರ ಪ್ರೇರಣೆ ಹಾಗೂ ಸಹಾಯದ ಮೇರೆಗೆ ಮತ್ತೆ ಲಂಡನ್ನಿಗೆ ತೆರಳಿದರು. ಅರ್ಧಕ್ಕೆ ನಿಂತಿದ್ದ ಅಧ್ಯಯನವನ್ನು ಪೂರ್ಣಗೊಳಿಸಿ ಮರಳಿಗೆ ಮುಂಬೈಗೆ ಬಂದರು. ನ್ಯಾಯವಾದಿಯಾಗಿ ಉಚ್ಚನ್ಯಾಯಾಲಯದಲ್ಲಿ ಕಾಯಕ ಆರಂಭಿಸಿದರು. ನಿಂತು ಹೋಗಿದ್ದ ಜನ ಧ್ವನಿಯ ಜೀವವಾಹಿನಿ ಪತ್ರಿಕೆಯನ್ನು ಮರಳಿ ಬಹಿಷ್ಕೃತ ಭಾರತ ಪತ್ರಿಕೆ ಆರಂಭಿಸಿದರು. 1924ರಲ್ಲಿ ಬಹಿಷ್ಕೃತ ಹಿತಕಾರಣಿ ಸಭಾ ಎನ್ನುವ ಸಂಘಟನೆಯನ್ನು ಆರಂಭಿಸಿದರು. ಅಸ್ಪೃಶ್ಯತೆಯಿಂದ ತುಳಿತಕ್ಕೊಳಗಾದ ಬಂಧುಗಳಿಗೆ ನೆರವಾದರು. 1927 ಮುಂಬೈ ವಿಧಾನ ಪರಿಷತ್ತಿನ ಸದಸ್ಯರಾದರು.ಅನೇಕ ವೇದಿಕೆ,ಸರಕಾರ ಎಲ್ಲಾ ಸಮಯದಲ್ಲೂ ದಲಿತ ಏಳಿಗೆಗಾಗಿ ಧ್ವನಿ ಎತ್ತಿದರು.

ಬ್ರಿಟಿಷ್ ಭಾರತದ ಹಣಕಾಸಿನ ಪ್ರಾಂತೀಯ ವಿಕೇಂದ್ರೀಕರಣ ಎನ್ನುವ ವಿಷಯದ ಮೇಲೆ ಪ್ರಬಂಧ ರಚಿಸಿ ವಿಶ್ವ ವಿದ್ಯಾಲಯಕ್ಕೆ ಅರ್ಪಿಸಿದರು.ನ್ಯಾಯ ಪಂಡಿತ (ಬ್ಯಾರಿಸ್ಟರ್) ಪದವಿ ಸಂಪಾದಿಸಿದರು.

**ಬಾಳೊಂದು ಹೋರಾಟ :** ಹುಟ್ಟುತ್ತಲೇ ಹೋರಾಟವನ್ನು ಬೆನ್ನಿಗೆ ಹಚ್ಚಿಕೊಂಡು ಹುಟ್ಟಿದ ಕ್ರಾಂತಿಯ ಸೇನಾನಿ ಬಾಬಾ ಸಾಹೇಬರು ಲಂಡನ್ನಿನ ಅಧ್ಯಯನವನ್ನು ಪೂರ್ಣಗೊಳಿಸಿ ಮರಳಿ ಬಂದರು.

ಹಿಂದೂ ಧರ್ಮದಲ್ಲಿರುವ ಅಸಮಾನತೆ ಕಂಡು ಮಮ್ಮಲ ಮರುಗಿದರು. ಇಯೋಲಾ ಧರ್ಮ ಸಮ್ಮೇಳನದಲ್ಲಿ ಮನ ಬಿಚ್ಚಿ ಮಾತನಾಡಿ ಬೌದ್ಧ ಧರ್ಮ ಸೇರ್ಪಡೆ ಆಗುವೆ ಎಂದು ಘೋಷಣೆ ಮಾಡಿದರು. ಆಗಲೂ ಗಾಂಧೀಜಿ ಅವರಿಗಿದು ಇಷ್ಟದ ವಿಷವಾಗಿರಲಿಲ್ಲ. 1956 ಅಕ್ಟೋಬರ್ 1ರಂದು ವಿಜಯದಶಮಿಯಂದು ಬೌದ್ಧ ಧರ್ಮ ಸ್ವೀಕರಿಸಿದರು. 1942 ರಲ್ಲಿ ಅಖಿಲ ಭಾರತ ಅನುಸೂಚಿತ ಜಾತಿ ಮಹಾಸಂಘ ಎಂಬ ಪಕ್ಷ ಕಟ್ಟಿದರು. ಆಗ ಮಹಾಯುದ್ಧ ತೀವ್ರಗೊಂಡಿತ್ತು. ವೈಯಕ್ತಿಕ ಲಾಭ ಎಂದೂ ಬಯಸದೆ ರಾಷ್ಟ್ರದ ಹಿತಕ್ಕಾಗಿ ಸಮರ್ಪಿತರಾದರು. ಕಾರ್ಮಿಕ ಮಂತ್ರಿಯಾಗಿ ಕೆಲಸ ಮಾಡಿದರು. ಕೇಂದ್ರ ಸರ್ಕಾರದಲ್ಲಿ ದಲಿತರಿಗೆ ನೌಕರಿ, ಮೀಸಲಾತಿಗೆ ದೊರೆಯುವಂತೆ ಮಾಡಿದರು. ಜನತಾ ಶಿಕ್ಷಣ ಸಂಘ ಎಂಬ ಶಿಕ್ಷಣ ಸಂಸ್ಥೆಯೊಂದನ್ನು ಹುಟ್ಟು ಹಾಕಿದರು .ಜ್ಞಾನದ ಬೆಳಕಿಗೆ ಮಹಾದ್ವಾರ ತೆರೆದರು.

**ಸಂವಿಧಾನ ಶಿಲ್ಪಿ:** 1946 ಡಿಸೆಂಬರ್ 9 ಸಂವಿಧಾನ ರಚನಾ ಸಮಿತಿ ರಚಿಸಿ ಶ್ರೀ ಬಾಬು ರಾಜೇಂದ್ರ ಪ್ರಸಾದ್ ಅಧ್ಯಕ್ಷತೆಯಲ್ಲಿ 7 ಜನ ಸಮಿತಿ ಸದಸ್ಯರಿಗೆ ಬಾಬಾ ಸಾಹೇಬರನ್ನು ಕಾರ್ಯಾಧ್ಯಕ್ಷರನ್ನಾಗಿ ಮಾಡಿದರು. ಸಮಿತಿ ಹಲವು ತೊಂದರೆಗಳನ್ನು ಅನುಭವಿಸಿತು. ತಾವೊಬ್ಬರೇ ದಿನಕ್ಕೆ18 ಗಂಟೆಗಳ ಕಾಲ ಕೆಲಸ ಮಾಡಿ ಹಲವು ದೇಶಗಳ ಪ್ರಜಾಪ್ರಭುತ್ವದ ಸಂವಿಧಾನಗಳನ್ನು ಅಧ್ಯಯನ ಮಾಡಿ 1948 ನವಂಬರ್ 4 ರಂದು ಭಾರತದ ಸಂವಿಧಾನ ಮಂಡನೆ ಮಾಡಿ" ಭಾರತದ ಸಂವಿಧಾನ ಶಿಲ್ಪಿ" ಎನ್ನುವ ಅಪರೂಪದ ಗೌರವಕ್ಕೆ ಪಾತ್ರರಾದರು .1947 ಆಗಸ್ಟ್ 15 ರಂದು ಭಾರತಕ್ಕೆ ಸ್ವಾತಂತ್ರ ಲಭಿಸಿತು. ಭಾರತದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರು ತಮ್ಮ ಮಂತ್ರಿ ಮಂಡಲದಲ್ಲಿ ಕಾನೂನು ಮಂತ್ರಿಗಳೆಂದು ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಸ್ಥಾನ ನೀಡಿದರು. ಮೌಲಿಕ ಸೈದ್ಧಾಂತಿಕ ಕಾನೂನು ಜಾರಿಗೆ ತಂದರು. ಬದುಕಿನ ಕೊನೆಯ ದಿನಗಳಲ್ಲಿ ಡಾ. ಶಾರದಾ ಕಬೀರ ನೆರವಾದರು. ಮುಂದೆ

ಅವರಲ್ಲಿ ಸ್ನೇಹ ಪ್ರೀತಿ ಚಿಗುರಿತು.ಅವರು ಸವಿತಾ ಅಂಬೇಡ್ಕರ್ ಎಂದಾದರು. ಕೊನೆಯ ದಿನಗಳಲ್ಲಿ ಅವರಿಗೆ ಊರುಗೋಲಾದರು."ಬುದ್ಧಂ ಶರಣಂ ಗಚ್ಛಾಮಿ– ಸಂಗಂ ಶರಣಂ ಗಚ್ಛಾಮಿ" ಎಂದೆನ್ನುತ್ತ 6 ಡಿಸೆಂಬರ್ 1956 ರಂದು ಬುದ್ಧ ಮಹಾ ಬೆಳಗಿನಲ್ಲಿ ಒಂದಾದರು. ಅಂದು ನಾಡಿನ ಸಮಾನತೆಯ ಸೂರ್ಯ ಅಸ್ತಂಗತರಾದರು.

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T